I have taken note of the seriousness of the hon. members. I may add that all formalities have been practically moved and we will take speediest action.

ಶ್ರೀ ಕಾಗೋಡು ತಿಮ್ಮಪ್ಪ.—ಯಾವತ್ತು ಕ್ರಮ ತೆಗೆದುಕೊಳ್ಳುತ್ತೀರಿ ?

Sri H. M CHANNABASAPPA.—I have how understood the feelings of the hon. Members of the Opposition. ನೀವು ಇನ್ನೊಂದು ಸಲ ಹೇಳುವುದರೊಳಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ —ಈ ತರಹ ಜಾಣ್ಮೆಯ ಉತ್ತರದಿಂದ ನಮಗೆ ಸಮಾಧಾನ ವಾಗುವುದಿಲ್ಲ. ಇಂತಹ ದಿವಸ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರೆ ಸಾಕು. ಇಂತಹ ವಾಕ್ಚಾತುರ್ಯ ನಮಗೆ ಬೇಡ ಈ ತರಹ ಮಾತಿನ ಪೆಜ್ಜನ್ನು ನಾವು ಕೇಳುವುದಕ್ಕೆ ಬಂದಿಲ್ಲ. ಈ ಸರ್ಕಾರ ಜೀವಂತ ಇದೆಯೇ ? ಈ ಸರ್ಕಾರಕ್ಕೆ ಮಾನ ಮರ್ಯಾದೆ ಇದೆಯೇ ? ಕೊರೆ ಪಾತಕ ಸರ್ಕಾರಕ್ಕೆ ಆತ್ಮಗೌರವ ಇದೆಯೇ ?

ಶ್ರೀ ಎಸ್. ಎಂ. ಕೃಷ್ಣ. ಯಾರಿಗೆ ಕೊರೆ ಪಾತಕರು ಎಂದು ಹೇಳುತ್ತಿದ್ದೀರಿ ?

ಶ್ರೀ ಕೋಣಂದೂರು ಲಿಂಗಪ್ಪ.—ನಿಮ್ಮ ಸರ್ಕಾರಕ್ಕೆ.

ಶ್ರೀ ಎಸ್ ಎಂ. ಶೀರನಾಳ ಚಂದ್ರಶೇಖರ್.—ನಾಲಗೆಗೆ ಮೂಳೆ ಇಲ್ಲ ಎಂದು ಹೇಳುತ್ತಾರೆ, ಲಿಂಗಪ್ಪನವರ ನಾಲಗೆಗೆ ಮೂಳೆ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ನೀವು ಅಧಿಕಾರಿಗಳಿಂದಲಾದರೂ ತಿಳಿದುಕೊಂಡು ಉತ್ತರ ಹೇಳಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಉತ್ತರ ಹೇಳುತ್ತೇನೆ.

MOTION OF THANKS TO THE GOVERNOR'S ADDRESS

—(Debate Continued)

† ಶ್ರೀ ಎಚ್. ಡಿ. ದೇವೇಗೌಡ.—ಅವರು ಉತ್ತರ ಹೇಳುವುದಕ್ಕೆ ಮುಂಚೆ ನಾನು ಒಂದು ಮಾತನ್ನು ಹೇಳುತ್ತೇನೆ. ನಿನ್ನೆ ಈ ಸಭೆಯಲ್ಲಿ ತಾವು ತಮ್ಮನ್ನು ಹೊರಗೆ ಹಾಕಿದ ಮೇಲೆ ರಾಜ್ಯಪಾಲರ ಭಾಷಣಕ್ಕೆ ಉತ್ತರ ಕೊಡಬೇಕು ಎಂದು ಸರ್ಕಾರವನ್ನು ತಾವು ಕೇಳಿದಾಗ ಪತ್ರಿಕೆಯಲ್ಲಿ ಬಂದಿರುವ ವರದಿ ಪ್ರಕಾರ ಯಾರೂ ಉತ್ತರ ಕೊಡಲಿಕ್ಕೆ ಸಿದ್ಧವಿರಲಿಲ್ಲ ಎನ್ನುವ ಅಭಿಪ್ರಾಯ ಬರುತ್ತದೆ. ಆದುದರಿಂದ ಸಭೆಯನ್ನು ಅರ್ಧಗಂಟೆ ಮುಂದೆ ಹಾಕಿದ್ದೀರಿ.

ಅಧ್ಯಕ್ಷರು.—ನಾನು ಹೇಳುತ್ತೇನೆ ಕೇಳಿ, ನಾನು ಯಾರು ಉತ್ತರ ಹೇಳುತ್ತೀರಿ ಎಂದು ಕೇಳುವಷ್ಟರೊಳಗೆ ಫೈನಾನ್ಸ್ ಮಿನಿಸ್ಟರ್ ನಾನು ಬಿಲ್ ಇಂಟರ್‌ಡ್ಯೂಸ್ ಮಾಡುತ್ತೇನೆ. ಎಂದು ಹೇಳಿದರು ; ಅದಕ್ಕೆ ಮೊದಲು ಉತ್ತರ ಆಗಲಿ, ಆಮೇಲೆ ಬಿಲ್ ಇಂಟರ್‌ಡ್ಯೂಸ್ ಮಾಡಿ ಎಂದು ಹೇಳುವಷ್ಟರಲ್ಲಿ ಅರ್ಧಗಂಟೆ ಅಡ್ಜರ್ನ್ ಆಯಿತು.

ಶ್ರೀ ಎಸ್. ಎಂ. ಕೃಷ್ಣ.—ಅಡ್ಜರ್ನ್ ಆದ ಉದ್ದೇಶ ಏನೆಂದರೆ, ತಾವು ಸಭೆಯಿಂದ ಹೊರಗೆ ಹೋದ ಮೇಲೆ ತಮ್ಮನ್ನು ಪರ್ಸುಯೇಡ್ ಮಾಡಿ ವಾಪಸ್ ಕರೆದುಕೊಂಡು ಬರಬೇಕು ಎನ್ನುವುದ ಕ್ಕೋಸ್ಕರ ಅಡ್ಜರ್ನ್ ಆಯಿತು.

ಶ್ರೀ ಎಚ್. ಡಿ. ದೇವೇಗೌಡ.—ನಿನ್ನೆ ನಾವು ಹೊರಗಡೆ ಕುಳಿತುಕೊಂಡಾಗ ಯಾವ ಪರ್ಸುಯೇಷನ್ ಮಾಡಲಿಲ್ಲ.

ಶ್ರೀ ಎಸ್. ಎಂ. ಕೃಷ್ಣ.— ಪರ್ಸುಯೇಷನ್ ಮಾಡಿ ಏನೂ ಪ್ರಯೋಜನವಾಗುವುದಿಲ್ಲ ಎಂದು ಸ್ಪೀಕರ್‌ರವರು ಹೇಳಿದರು.

ಶ್ರೀ ಎಚ್. ಡಿ. ದೇವೇಗೌಡ.—ರಾಜ್ಯಪಾಲರು ಭಾಷಣಕ್ಕೆ ಸಾಮಾನ್ಯವಾಗಿ ಮುಖ್ಯ ಮಂತ್ರಿಗಳು ಉತ್ತರ ಕೊಡಬೇಕು. ನಿನ್ನೆ ಶ್ರೀಮಾನ್ ರಾಚಯ್ಯನವರು ಜತ್ತಿ ಸರ್ಕಾರ ಮತ್ತು

ದೇವರಾಜ್ ಸರ್ಕಾರ ಎಲ್ಲವನ್ನೂ ರಿಹರ್ಸಲ್ ಮಾಡಿದರು ಎಂದು ಗೊತ್ತಾಯಿತು. ಅದರ ಬಗ್ಗೆ ಹೇಳತಕ್ಕದ್ದು ನನಗೆ ಅವಶ್ಯಕತೆ ಇಲ್ಲ. ಮುಖ್ಯವಾದ ವಿಚಾರ ಏನೆಂದರೆ, ಮಾನ್ಯ ಮುಖ್ಯ ಮಂತ್ರಿಗಳು ಕಾವೇರಿ ಜಲವಿವಾದಕ್ಕೆ ಸಂಬಂಧಪಟ್ಟಂತೆ ಡೆಲ್ಲಿಗೆ ಹೋಗಿದ್ದಾರೆ. ನಮ್ಮ ಜೊತೆಗೆ ಕೂಡ ಮಾತನಾಡಿ ಹೋದರು. 15—16ನೇ ತಾರೀಖು ಡೆಲ್ಲಿಯಲ್ಲಿ ಸಭೆ ಅಂತ್ಯ ಆಯಿತು. 17-18-19ನೇ ತಾರೀಖು ಈ ಸಭೆಯಲ್ಲಿ ಪ್ರಾಮುಖ್ಯವಾದ ವಿಷಯಗಳನ್ನು ಚರ್ಚೆ ಮಾಡಿದ್ದೇವೆ. ಮಂಗಳೂರಿನ ಘಟನೆ ಬಗ್ಗೆ ಕೂಡ ಚರ್ಚೆ ಮಾಡಿದ್ದೇವೆ. ರಾಜ್ಯದ ಪ್ರಮುಖ ಸಮಸ್ಯೆಗಳ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಶಾಸನ ಸಭೆ ನಡೆಯುವಾಗ ಡೆಲ್ಲಿಗೆ ಹೋಗತಕ್ಕ ವಿಚಾರದಲ್ಲಿ ನನ್ನ ಅಭ್ಯಂತರ ಇಲ್ಲ. ಈಗ ಡೆಲ್ಲಿಯಲ್ಲಿ ಕಾವೇರಿ ಜಲವಿವಾದಕ್ಕೆ ಸಂಬಂಧಪಟ್ಟ ಪ್ರಶ್ನೆ ಇತ್ಯರ್ಥವಾಗಿ ಬೇರೆ ಬೇರೆ ರಾಜ್ಯದ ಮುಖ್ಯಮಂತ್ರಿಗಳು ಅವರ ರಾಜ್ಯಗಳಿಗೆ ಹೋಗಿದ್ದಾರೆ.

ಸಂಬಂಧಪಟ್ಟವರ ಜೊತೆಗೆ ಈಗಾಗಲೆ ಚರ್ಚೆ ಮಾಡಿದ್ದಾರೆ. ಕರ್ನಾಟಕದ ಮುಖ್ಯಮಂತ್ರಿಗಳು ಕಳೆದ 3 ದಿವಸಗಳಿಂದ ಈ ಸಭೆಯನ್ನು ನಿರ್ಲಕ್ಷಿಸಿದ್ದಾರೆಂದು ಹೇಳಿದರೆ ತಪ್ಪಾಗಲಕ್ಕೆ ಇಲ್ಲ. ರಾಜ್ಯಪಾಲರ ಭಾಷಣದ ಮೇಲೆ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು. ಶ್ರೀ ರಾಚಯ್ಯನವರನ್ನು ಕೌನ್ಸಿಲ್ಲಿನಿಂದ ಕರೆಸಿ ಉತ್ತರ ಹೇಳತಕ್ಕಂಥದ್ದಲ್ಲ. ಅದು ಸರ್ಕಾರಕ್ಕೆ ಎಂದೆಂದಿಗೂ ಗೌರವ ತರುವುದಿಲ್ಲ. ಇದರಿಂದ ಈ ಮನೆಯನ್ನು ಇಷ್ಟು ಕೀಳದರ್ಜೆಯಲ್ಲಿ ಕಾಣುತ್ತಿದ್ದಾರೆ ಎನ್ನುವುದು ಅರ್ಥವಾಗುತ್ತದೆ, ಇದಕ್ಕೆ ಪೂರ್ಣ ಸಮಾಧಾನವನ್ನು, ಒಂದು ಅತೃಪ್ತಿಯನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ. ಮುಖ್ಯಮಂತ್ರಿಗಳು ಇನ್ನಾದರೂ ಆ ಪ್ರವೃತ್ತಿಯನ್ನು ಪಾರ್ಲಿಮೆಂಟರಿಯನ್ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

3-30 P. M.

Sri H. M. CHANNABASAPPA.—His statement cannot go unanswered. ಕಾವೇರಿ ನದಿನೀರಿನ ಹಂಚಿಕೆಯ ವಿಷಯದ ಬಗ್ಗೆ ಅಲ್ಲಿ ಚರ್ಚೆಯಾದ ಮೇಲೆ ಇನ್ನು ಎರಡು ಮೂರು ಗಹನವಾದ ವಿಷಯಗಳು ಇದ್ದುದರಿಂದ ಅವರು ಅಲ್ಲಿಯೇ ಉಳಿದುಕೊಂಡಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದು ಹೇಗಾಗಿದೆ ಎಂದರೆ, ಈ ಮನೆಯ ಸಭಾನಾಯಕರೂ ಇಲ್ಲ, ಅವರೆಲ್ಲೂ ಹೋಗಿದ್ದಾರೆಂದರೆ, ಈ ಕೆಳಮನೆಯ ಉಪ ಸಭಾ ನಾಯಕರೂ ಇಲ್ಲ. ಈಗ ಮಾನ್ಯ ಚನ್ನಬಸಪ್ಪನವರೇ ಈ ಮನೆಯ ಸಭಾನಾಯಕರು ಆಗುವ ಪರಿಸ್ಥಿತಿ ಬಂದಿದೆ.

ಅಧ್ಯಕ್ಷರು.—ಈ ಸಭೆಗೆ ಉಪ ನಾಯಕರು ಯಾರು ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಒಂದು ಸಾರಿ ಮಾನ್ಯ ದೇವರಾಜ ಅರಸ್‌ರವರು ಹೇಳಿದ್ದಾರೆ, ಈ ರಾಜ್ಯಪಾಲರ ಭಾಷಣ ಬಹಳ ಮುಖ್ಯವಾದದ್ದು ಹೆಚ್ಚು ಕಮೆ ಸರ್ಕಾರದ ರೀತಿ ನೀತಿಗಳೇನು, ಒಂದು ವರ್ಷದಲ್ಲಿ ಸರ್ಕಾರದವರು ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಾರೆ ಎನ್ನತಕ್ಕಂಥದ್ದೆಲ್ಲಾ ಇದರಲ್ಲಿ ಬರುತ್ತದೆಂದು ಹೇಳಿದ್ದಾರೆ. ಆದರೆ ಇವತ್ತು ರಾಜ್ಯಪಾಲರ ಭಾಷಣದ ಮೇಲೆ ಇಲ್ಲ ಮಾನ್ಯ ಸದಸ್ಯರೇನೇನು ಮಾತನಾಡಿದ್ದಾರೆ ಎಂಬುದನ್ನು ಅವರು ಇಲ್ಲಿದ್ದು ಕೇಳಲೇ ಇಲ್ಲ. ಚರ್ಚೆಯಲ್ಲಿ ಏನೇನು ಅನುಭವಗಳನ್ನು ಅಭಿಪ್ರಾಯಗಳನ್ನು ಮಾನ್ಯ ಸದಸ್ಯರುಗಳು ಕೊಟ್ಟಿದ್ದಾರೆಂಬುದನ್ನು ಕೇಳಲಲ್ಲ, ಅದಕ್ಕೆಲ್ಲಾ ಏನು ಉತ್ತರ ಹೇಳುತ್ತಾರೋ ಗೊತ್ತಿಲ್ಲ.

† ಶ್ರೀ ಎಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ನಾವು ಇಲ್ಲಿ ಇರದೇ ಇದ್ದರೂ ಇಲ್ಲಿ ಏನೇನು ನಡೆಯಿತು ಎನ್ನತಕ್ಕಂಥ ಸಮಾಚಾರ ತಿಳಿದುಕೊಳ್ಳತಕ್ಕಂಥ ಶಕ್ತಿ ಇದೆ.

ಮಾನ್ಯ ಅಧ್ಯಕ್ಷರೆಯವರೇ ರಾಜ್ಯಪಾಲರು ರಾಜ್ಯಾಂಗ ದತ್ತವಾಗಿ ಸ್ವೀಕಾರ ಮಾಡಿರತಕ್ಕಂಥ ಕಾನೂನಿನ ಪ್ರಕಾರ ಈ ಭಾಷಣವನ್ನು ಉಭಯ ಸದನಗಳು ಸೇರಿದಂಥ ಸಭೆಯಲ್ಲಿ ಮಾಡತಕ್ಕಂಥದ್ದು ಸಂಪ್ರದಾಯ. ಅದರ ಪ್ರಕಾರವಾಗಿ ರಾಜ್ಯಪಾಲರು ಈ ರಾಜ್ಯದ ಆರ್ಥಿಕ ಸಾಮಾಜಿಕ ಧೋರಣೆಗಳೇನಿವೆ, ಅವಗಳನ್ನು ಅವರು ತಿಳಿಸಿದ್ದಾರೆ. ಆ ಧೋರಣೆಗಳಿಗನುಸಾರವಾಗಿ ಎಲ್ಲೆಲ್ಲ ಯಾವ ಯಾವ ಕೆಲಸಗಳನ್ನು ಮಾಡಬೇಕಾಗಿದೆ, ಏನೇನು ಮಾಡಬೇಕೆಂಬುದನ್ನು ಹೇಳಿ, ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟು ಆ ಅಂಶಗಳನ್ನೆಲ್ಲಾ ಸರ್ಕಾರಕ್ಕೆ ತಿಳಿಸತಕ್ಕಂಥದ್ದೂ ಒಂದು ಸಂಪ್ರದಾಯ. ಸಾಮಾನ್ಯವಾಗಿ ರಾಜ್ಯಪಾಲರ ಭಾಷಣಕ್ಕೆ ವಿರೋಧ ಮಾಡತಕ್ಕಂಥದ್ದು

ಅಥವಾ ಅಡ್ಡಿ ಪಡಿಸತಕ್ಕಂಥದ್ದು ಸಂಪ್ರದಾಯಕ್ಕೆ ವಿರೋಧ ಮತ್ತು ಉಚಿತವಲ್ಲ. ಒಂದು ಸಂವಿಧಾನದ ಪ್ರಕಾರ ಉಭಯ ಸದನಗಳನ್ನು ಉದ್ದೇಶಿಸಿ ಭಾಷಣ ಮಾಡತಕ್ಕಂಥದ್ದು ಸಂಪ್ರದಾಯ ಅದಕ್ಕೆ ವಿರೋಧ ಪಕ್ಷದವರು ವಿರೋಧ ಮಾಡತಕ್ಕಂಥದ್ದು ಚರ್ಚೆ ಮಾಡತಕ್ಕಂಥ ಕಾಲದಲ್ಲಿ, ಆಗ ಎಷ್ಟೇ ವಿರೋಧವನ್ನು ವ್ಯಕ್ತಪಡಿಸಿದರೂ ಕೂಡ ನಮಗೆ ಅಡ್ಡಿಯಿಲ್ಲ.

Sri H. D. DEVEGOWDA.—I am Sorry for my interference at the earliar stage. ಮಾನ್ಯ ಮಂತ್ರಿಗಳು ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುವಾಗ, ರಾಜ್ಯಪಾಲರನ್ನು ನೇಮಕ ಮಾಡುವಾಗ ಏನೇನು ಅರ್ಹತೆಗಳು ಅವರಿಗೆ ಇರಬೇಕು, ಎಂಥವರನ್ನು ಆಯ್ಕೆ ಮಾಡಬೇಕು ಎನ್ನತಕ್ಕಂಥದ್ದಕ್ಕೆ ಉತ್ತರಕೊಡಬೇಕು.

Sri H. M. CHANNABASAPPA.—He is going beyond some limit. It is not an individual that counts, but it is the Governor that counts here. So it is a disrespect to Governor. ಇಲ್ಲಿ ಸಂವಿಧಾನಾತ್ಮಕವಾಗಿ ಗವರ್ನರ್‌ರವರು ಒಂದು ಭಾಷಣ ಮಾಡುವಾಗ, ಆ ಭಾಷಣದ ಮೂಲಕ ಆರ್ಥಿಕ ಸಾಮಾಜಿಕ ಧೋರಣೆಗಳೇನಿವೆ ಮತ್ತು ಅವರು ಯಾವ ರೀತಿ ಆ ಧೋರಣೆಗಳನ್ನು ಕಾರ್ಯಗತಗೊಳಿಸುವುದಕ್ಕೆ ಏನೇನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಮತ್ತು ಮುಂದೆ ಏನು ಕಾರ್ಯಕ್ರಮ ಸರ್ಕಾರ ತೆಗೆದುಕೊಳ್ಳಬೇಕೆಂದು ಇದೆ ಅಷ್ಟು ವಿಷಯಗಳನ್ನು ಮಾತ್ರ ಅವರು ಪ್ರಸ್ತಾಪ ಮಾಡಿದ್ದಾರೆ. ಅದನ್ನು ನಾವು ಗಾರವದಿಂದ ಸ್ವೀಕಾರ ಮಾಡತಕ್ಕಂಥದ್ದು ಉಚಿತ. ಅದನ್ನು ಬಿಟ್ಟು ಭಾಷಣ ಮಾಡುವುದಕ್ಕೆ ಅಡ್ಡಿ ತರತಕ್ಕಂಥದ್ದು ಸಂಪ್ರದಾಯವೇ ಎಂದು ಕೇಳುತ್ತೇನೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರು ಭಾಷಣ ಮಾಡುತ್ತಿದ್ದಾಗ ಕೆಲವು ವಿರೋಧ ಪಕ್ಷದ ಸದಸ್ಯರು ಅಡ್ಡಿ ಪಡಿಸಿದರೆಂದು ಅವರ ಬಗ್ಗೆ ಕ್ರಮ ತೆಗೆದುಕೊಳ್ಳಲು ಈಗಾಗಲೇ ಒಂದು ಸಮಿತಿ ನೇಮಕ ಮಾಡಿರುವಾಗ ಪುನಃ ಆ ವಿಚಾರದ ಬಗ್ಗೆ ಇಲ್ಲಿ ಮಾನ್ಯ ಮಂತ್ರಿಗಳವರು ವ್ಯಾಖ್ಯಾನ ಮಾಡತಕ್ಕಂಥದ್ದು ಸೂಕ್ತವಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಒಂದು ನತ್ ಸಂಪ್ರದಾಯವನ್ನು ಬಹು ದಿವಸಗಳಿಂದ ಬೆಳೆಸಿಕೊಂಡು ಬಂದಿದ್ದೇವೆ. ಬಹುಶಃ ಈ ತರಹದ ಘಟನೆ ಹಿಂದೆಂದೂ ಆಗಿರಲಿಲ್ಲ.

Sri H. D. DEVEGOWDA.—When a committee is appointed for that purpose, why is he raising that issue ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ನತ್ ಸಂಪ್ರದಾಯಗಳನ್ನು ಬೆಳೆಸಿಕೊಂಡು ಹೋಗಬೇಕು, ಪ್ರಜಾಪ್ರಭುತ್ವದ ತಳಹದಿಯ ಮೇಲೆ ಹೋಗಲೇಬೇಕು, ಆ ಎರಡ್ಲಾ ಅಂಶಗಳನ್ನು ಬೆಳೆಸಿಕೊಂಡು ಹೋಗಬೇಕು ಎನ್ನತಕ್ಕಂಥದ್ದೇ ನನ್ನ ಆಶಯ. ರಾಜ್ಯಪಾಲರ ಭಾಷಣದ ಬಗ್ಗೆ ಇಲ್ಲಿ ಚರ್ಚೆ ಮಾಡುವ ಕಾಲದಲ್ಲಿ ಸಾಮಾನ್ಯವಾಗಿ ಅವರು ಹೇಳಿದಂಥ ಧ್ಯೇಯಧೋರಣೆಗಳ ಬಗ್ಗೆ ಟೀಕೆ ಮಾಡತಕ್ಕಂಥದ್ದು ಸಂಪ್ರದಾಯ. ಅದನ್ನು ಒಪ್ಪಿಕೊಳ್ಳಬೇಕು, ಇಲ್ಲದೇ ಹೋದರೆ ಅದನ್ನು ಟೀಕೆ ಮಾಡತಕ್ಕಂಥದ್ದು ಒಂದು ಸಂಪ್ರದಾಯ ಹೊದಲನಿಂದಲೂ ಬೆಳೆದು ಬಂದಿದೆ. ಆದು ಇವತ್ತು ನಿನ್ನೆದು ಅಲ್ಲ. ರಾಜ್ಯದಲ್ಲಿರತಕ್ಕಂಥ ಈ ಇಲಾಖೆಗಳು ಏನಿವೆ, ಅದರಲ್ಲಿರತಕ್ಕಂಥ ಲೋಪದೋಷಗಳು, ಮತ್ತು ಇನ್ನು ಯಾವುದೇ ವಿಷಯಗಳು ಏನಿವೆ ಅವುಗಳ ಬಗ್ಗೆ ಟೀಕೆ ಟಿಪ್ಪಣಿಯನ್ನು ಮಾಡತಕ್ಕಂಥದ್ದನ್ನು ಬಹುಕಾಲದಿಂದ ಬೆಳೆಸಿಕೊಂಡು ಬಂದಿದ್ದೇವೆ.

(ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಎಚ್. ಡಿ. ದೇವೇಗೌಡ.—ನಿಮ್ಮ ಪಾರ್ಟಿಯಲ್ಲಿರತಕ್ಕಂಥ ಒಬ್ಬ ಸೀನಿಯರ್ ಸದಸ್ಯರು, ಹಿಂದೆ ಕ್ಯಾಬಿನೆಟ್‌ನಲ್ಲಿದ್ದಂಥವರೇ ''ಗುಮಾನ್ತರು ಬರೆದುಕೊಟ್ಟಿದ್ದನ್ನು ಗವರ್ನರ್‌ರವರು ಓದಿದರು'' ಅಂತ ಹೇಳಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾವು ಡಿಕ್ಟೇಟ್ ಮಾಡುವುದನ್ನು ಗುಮಾನ್ತರು ಬರೆಯುತ್ತಾರೆ, ನಾವೇ ಬರೆಯುವುದಿಲ್ಲ. ನಾವು ಹೇಳಿದ ಎಷ್ಟೋ ವಿಷಯಗಳನ್ನು ಅವರು ಬರೆದು ಕೊಡುತ್ತಾರೆ ಅದನ್ನು ನಾವು ಇಲ್ಲಿ ತಂದು ಓದಿದರೆ ತಪ್ಪೇನೂ ಇಲ್ಲ. ಎಲ್ಲವನ್ನೂ ಕೂಡ ಮಂತ್ರಿಗಳು ಮಾಡುವುದಕ್ಕೆ ಆಗುವುದಿಲ್ಲ. ಮಂತ್ರಿಗಳು ಅಭಿಪ್ರಾಯ ಕೊಡುತ್ತಾರೆ, ಡಿಕ್ಟೇಟ್ ಮಾಡುತ್ತಾರೆ, ಟೈಪ್ ಆಗುತ್ತದೆ ಅದು ಬರುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಬರೆದುಕೊಂಡು ತಂದಿದ್ದಕ್ಕೆಲ್ಲಾ ಸುಮ್ಮನೆ ರುಜು ಹಾಕುವವರು ಇದ್ದಾರೆ. ಒಂದು ಸಾರಿ ಮಂತ್ರಿಗಳು ರಾಜಿನಾಮೆ ಪತ್ರತಂದುಕೊಟ್ಟಿದಕ್ಕೆ ರುಜು ಹಾಕಿದ್ದ ರಂತೆ ನಿಜವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಿಂದೆ ಆ ರೀತಿ ಆಗಿರಬಹುದು. ಅದು ಏನೇ ಇರಲಿ ನಾನು ಈಗಾಗಲೇ ಹೇಳಿದಂತಹ ಆ ಒಂದು ಸಂಪ್ರದಾಯ ಬೆಳೆದುಬಂದುಬಿಟ್ಟಿದೆ, ರಾಜ್ಯಾ ಡಳಿತದಲ್ಲಿ ಲೋಪದೋಷಗಳನ್ನು ಎತ್ತಿ ಮಾತನಾಡತಕ್ಕದ್ದು, ಟೀಕೆ ಮಾಡತಕ್ಕದ್ದು ಸ್ವಾಭಾವಿಕ ಆದರೆ, ಯಾವ ಸಂದರ್ಭದಲ್ಲಿ ಮಾಡಬೇಕು ಎನ್ನುವುದು ನನ್ನ ಅಭಿಪ್ರಾಯ. ಬಜೆಟ್ ಮುಂದನೆ ಆಗುತ್ತದೆ, ಬಜೆಟ್ ಮೇಲೆ ಜೇಕಾಡಪ್ಪು ಚರ್ಚೆ ಆಗುತ್ತದೆ. ಡಿಮ್ಯಾಂಡುಗಳ ಮೇಲೆ, ಪ್ರತಿಯೊಂದು ಇಲಾಖೆಗಳ ಮೇಲೆ ಅಲ್ಲಿ ಇರತಕ್ಕ ಲೋಪದೋಷಗಳನ್ನು ಎತ್ತಿ ತೋರಿಸತಕ್ಕಂಥಾದ್ದು ಮತ್ತು ಅದಕ್ಕೆ ಸರ್ಕಾರ ಉತ್ತರ ಕೊಡತಕ್ಕಥಾದ್ದು ಎಲ್ಲವೂ ಸಂಪ್ರದಾಯ. ನಮ್ಮಲ್ಲಿ ಬೆಳೆದುಬಂದಿರ ತಕ್ಕ ಸಂಪ್ರದಾಯ ರಾಜ್ಯಪಾಲರ ಭಾಷಣದಲ್ಲಿ ಮೊದಲಿಂದ ಕೊನೆಯವರೆಗೆ (ಎ ಟು ಜಡ್) ಎಲ್ಲವೂ ಕೂಡ ಟೀಕೆ ಮಾಡತಕ್ಕ ಸಂಪ್ರದಾಯ ಬಂದುಬಿಟ್ಟಿದೆ. ಅದು ಸರಿಯಲ್ಲ ಎನ್ನತಕ್ಕದ್ದು ನನ್ನ ಅಭಿಪ್ರಾಯ.

ಶ್ರೀ ಎಚ್. ಡಿ. ದೇವೇಗೌಡ.—ಲೇಟ್ ರಿಯಲೈಜೇಷನ್. ನೀವು ಇಲ್ಲಿ ಕೂತಾಗ ಹಾರಾಡುತ್ತಿದ್ದಿರಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನನ್ನನ್ನು ನೇರಿಸಿ ಮಾತನಾಡುತ್ತಾರೆ. ಹಿಂದೆ ತಪ್ಪು ಮಾಡಿದ್ದೇವೆ, ಮುಂದೆ ಒಳ್ಳೆರುದನ್ನು ಬೆಳೆಸಿಕೊಂಡು ಹೋಗುವುದರಲ್ಲಿ ತಪ್ಪು ಇಲ್ಲ. ನಾನು ಮಾಡಲಿಲ್ಲ ಎಂದು ಹೇಳಿದ್ದರೆ ನೀವು ನನ್ನನ್ನು ಆಕ್ಷೇಪಣೆ ಮಾಡಬಹುದಾಗಿತ್ತು. ಅದು ಏನೇ ಆಗಲೀ ಅನೇಕ ಪ್ರಶ್ನೆಗಳನ್ನು ರಾಜ್ಯಪಾಲರ ಭಾಷಣದ ಮೇಲೆ ಎತ್ತಿರುವಾಗ, ರಾಜ್ಯಪಾಲರ ಭಾಷಣಕ್ಕೆ ಉತ್ತರ ಕೊಡತಕ್ಕ ಕಾಲದಲ್ಲಿ ಎಲ್ಲ ಪ್ರಶ್ನೆಗಳಿಗೂ ಉತ್ತರ ಕೊಡುವುದು ಕಷ್ಟವಾಗುತ್ತದೆ. ಆಯಾಯಾ ಇಲಾಖೆಗಳಿಗೆ ಸಂಬಂಧಪಟ್ಟ ಪ್ರಶ್ನೆಗಳು ಡಿಮ್ಯಾಂಡುಗಳು, ಬರುತ್ತವೆ. ಆ ಬಗ್ಗೆ ಸರ್ಕಾರ ಸೂಕ್ತ ಉತ್ತರಗಳನ್ನು ಸದಸ್ಯರ ಮನಸ್ಸಿಗೆ ತೃಪ್ತಿಯಾಗುವಂತೆ ಉತ್ತರ ಕೊಡತಕ್ಕದ್ದು ನ್ಯಾಯ. ರಾಜ್ಯಪಾಲರ ಭಾಷಣಕ್ಕೆ ಉತ್ತರ ಕೊಡತಕ್ಕಂಥ ಕಾಲದಲ್ಲಿ ಕೇವಲ ನೀತಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಆಕ್ಷೇಪಣೆಗಳು ಏನಾದರೂ ಬಂದಿದ್ದರೆ, ಟೀಕೆ ಟಿಪ್ಪಣಿಗಳು ಬಂದಿದ್ದರೆ ಅಂಥಾದಕ್ಕೆ ಸಹಜವಾಗಿ ಉತ್ತರ ಕೊಡುವುದು ನನ್ನ ಕರ್ತವ್ಯ. ನಾನು ಇಡೀ ರಾಜ್ಯಪಾಲರ ಭಾಷಣದ ಮೇಲೆ ಎಷ್ಟು ಚರ್ಚೆ ಆಗಿದೆಯೋ ಅದನ್ನು ಸ್ವಲ್ಪಮಟ್ಟಿಗೆ ಅಧ್ಯಯನ ಮಾಡಿದ್ದೇನೆ. ಆಡಳಿತ ಯಂತ್ರದಲ್ಲಿ ಲೋಪದೋಷಗಳ ವಿಷಯದಲ್ಲಿ ಹೆಚ್ಚು ಚರ್ಚೆ ಆಗಿದೆಯೇ ಹೊರತು, ರಾಜ್ಯದ ಆರ್ಥಿಕ ಸಾಮಾಜಿಕ ನೀತಿಗಳ ಬಗ್ಗೆ ಯಾರು ಖಂಡನೆ ಮಾಡಿಲ್ಲ. ಈಗ ರಾಜ್ಯದ ಆರ್ಥಿಕ ಸಾಮಾಜಿಕ ನೀತಿಗಳ ಮೇಲೆ ಸಂಪೂರ್ಣ ಒಪ್ಪಿಗೆ ಇದೆ ಎಂದು ತುಂಬ ಸಂತೋಷದಿಂದ ಒಪ್ಪಬೇಕಾಗುತ್ತದೆ. ಆದುದರಿಂದ ಸಾಮಾಜಿಕ ಆರ್ಥಿಕ ನೀತಿಗಳ ಬಗ್ಗೆ ಪುನಃ ಪ್ರಸ್ತಾಪ ಮಾಡಬೇಕಾದುದು ಅನಾವಶ್ಯಕ. ಅವರು ಒಪ್ಪಿದ ಮೇಲೆ ಪ್ರಸ್ತಾಪಮಾಡುವುದು ಅನಾವಶ್ಯಕವಾಗುತ್ತದೆ.

ಶ್ರೀ ಕೋಣಂದರೂ ಲಿಂಗಪ್ಪ.—ರಾಜ್ಯಪಾಲರ ಭಾಷಣದಲ್ಲಿ ಆರ್ಥಿಕ ಸಾಮಾಜಿಕ ರೀತಿ ನೀತಿ ಬಗ್ಗೆ ಏನು ಹೇಳಿದ್ದಾರೆ ? ಡಿಪಾರ್ಟ್‌ಮೆಂಟ್ ವರದಿ ಇದೆ ಅಷ್ಟೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಆರ್ಥಿಕ ಸಾಮಾಜಿಕ ನೀತಿಗಳ ಬಗ್ಗೆ ಉತ್ಪಾದನೆ ಕಾರ್ಯ ರೂಪಕ್ಕೆ ತರತಕ್ಕ ಕರ್ತವ್ಯದಲ್ಲಿ ಎಷ್ಟೆಷ್ಟು ಪ್ರಮಾಣದಲ್ಲಿ ಮುಂದೆ ಬಂದಿದ್ದೇವೆ, ಎಷ್ಟು ಪ್ರಮಾಣ ದಲ್ಲಿ ಮಾಡಬೇಕಾಗುತ್ತದೆ ಎಂಬುದನ್ನು ಎಲ್ಲವನ್ನೂ ವಿಷದವಾಗಿ ತಿಳಿಸಿದ್ದಾರೆ. ಈಗ ತಾವು ಎತ್ತಿರತಕ್ಕ ಇಲಾಖೆಗಳಲ್ಲಿ ಲೋಪದೋಷಗಳು ಏನು ಇವೆ, ಅಡ್ಡಿಗಳು ಏನು ಇವೆ ಇವುಗಳ ಬಗ್ಗೆ ರಚನಾತ್ಮಕವಾಗಿರುವುವು ಕೆಲವು ಇವೆ. ಅದಕ್ಕೆ ನಾನು ತಮ್ಮೆಲ್ಲರಿಗೂ ವಂದಿಸುತ್ತೇನೆ. ಚನ್ನಾತ್ಮಕ ಸಲಹೆಗಳನ್ನೂ, ಟೀಕೆ ಪಟ್ಟಿಣಿಗಳನ್ನೂ ಸ್ವಾಗತ ಮಾಡತಂಥಾದ್ದು ರಾಜ್ಯ ಸೂತ್ರ ಹಿಡಿದಿರತಕ್ಕವರ ಪ್ರಥಮ ಕರ್ತವ್ಯ. ಆದುದರಿಂದ, ರಚನಾತ್ಮಕ ಸಲಹೆಗಳನ್ನು ಏನೇನು ಮಾಡಿದ್ದಾರೆ ಅವುಗಳೆಲ್ಲವನ್ನು ಕೂಡ ವಿಶ್ವಾಸದಿಂದ ಸ್ವೀಕರಣೆ ಮಾಡಿ, ಈ ಬಗ್ಗೆ ಸರ್ಕಾರ ಸೂಕ್ತ ಕಾರ್ಯ ಕ್ರಮ ತೆಗೆದುಕೊಳ್ಳುವುದು ಎಂದು ಭರವಸೆ ಕೊಡುತ್ತೇನೆ. ರಚನಾತ್ಮಕ ಅಲ್ಲದ ವಿಷಯಗಳ ಬಗ್ಗೆ ವಿಷಾದ ಪಡಬೇಕಾಗಿದೆ. ಏಕೆಂದರೆ, ಈ ಸಭೆಯಲ್ಲಿ ರಚನಾತ್ಮಕವಾಗಿ ತಾವು ಕೆಲಸ ಮಾಡಬೇಕು, ನಾವು ಕೆಲಸ ಮಾಡಬೇಕು. ರಚನಾತ್ಮಕವಾಗಿ ಇಲ್ಲದೇ ಇರುವುದು ನಮಗೂ ಬೇಡ ನಿಮಗೂ ಬೇಡ. ಆಡಳಿತದ ಲೋಪದೋಷಗಳ ಬಗ್ಗೆ ಬಹಳಮಟ್ಟಿಗೆ ದೇಶದಲ್ಲಿ ಹೋಂ ಡಿಪಾರ್ಟ್

ಮೆಂಟ್ ಏನು ಇದೆ, ಇದರ ಬಗ್ಗೆ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಬಾಕಿ ಇಲಾಖೆಗಳ ಬಗ್ಗೆ ಕೂಡ ಮಾಡಿದ್ದಾರೆ. ಇದರ ಬಗ್ಗೆ ಎಲ್ಲದಕ್ಕೂ ಉತ್ತರ ಕೊಡುವುದು ಅನಾವಶ್ಯಕ. ಕಾರಣ ಅಯಾ ಇಲಾಖೆಗೆ ಸಂಬಂಧಪಟ್ಟಂತೆ ಡಿಮ್ಯಾಂಡುಗಳು ಚರ್ಚೆಗೆ ಬರುತ್ತವೆ. ಸಣ್ಣಪುಟ್ಟ ಲೋಪ ದೋಷಗಳು ಇದ್ದರೆ ಅವುಗಳನ್ನು ಗಮನಕ್ಕೆ ತೆಗೆದುಕೊಂಡು ಉತ್ತರ ಕೊಡಬೇಕೆಂದು ಎಂದು ಹೇಳುವುದರಲ್ಲಿ ಅಭ್ಯಂತರ ಇಲ್ಲ. ಈಗ ಮುಖ್ಯವಾಗಿ ಆಡಳಿತ ಯಂತ್ರದಲ್ಲಿ ಇರುವ ಲೋಪದೋಷಗಳನ್ನು ಸರಿಪಡಿಸುವುದರಲ್ಲಿ ನಮ್ಮದು ಕೆಲಸ ಇದೆ, ತಮ್ಮದು ಕೆಲಸ ಇದೆ. ನವೀನ ರೀತಿಯಲ್ಲಿ ಅವುಗಳನ್ನು ಸರಿಪಡಿಸಬೇಕು. ಸರಿಪಡಿಸಿ ರಚನಾತ್ಮಕ ರೀತಿಯಲ್ಲಿ ಮುಂದುವರಿದು ಹೋಗುವುದಕ್ಕೆ ತಾವು ಸಹಕಾರ ಕೊಡಬೇಕು ಎಂದು ಹೇಳಿದ್ದೇನೆ. ಈ ಬಗ್ಗೆ ನಮ್ಮ ನಿಮ್ಮಲ್ಲಿ ಇರತಕ್ಕ ಶಕ್ತಿಸಾಮರ್ಥ್ಯಗಳನ್ನು ಪ್ರಯೋಗ ಮಾಡಬೇಕೇ ಏನಹ, ಆಡಳಿತ ಯಂತ್ರ ಮತ್ತಷ್ಟು ನಡಿಲವಾಗುವುದಕ್ಕೆ, ಅದರಲ್ಲಿ ಅನೀತಿ ಅತ್ಯಾಚಾರಗಳನ್ನು ಹೆಚ್ಚಿಸಲಿಕ್ಕೆ ನಾವು ಪ್ರಯತ್ನ ಮಾಡಬಾರದು ರಾಜಕೀಯ ಎನ್ನತಕ್ಕಂಥಾದ್ದು ರಾಜಕೀಯವಾಗಿಯೇ ಉಳಿಯಬಾರದು. ರಾಜಕೀಯಕ್ಕೆ ಅಧ್ಯಾತ್ಮಿಕ ಹಿನ್ನೆಲೆ ಇರಬೇಕು. ರಾಜಕೀಯಕ್ಕೆ ಧರ್ಮ ಏನು ಇದೆ, ಅದರ ಮೆರಗು ಆಗಬೇಕು ಆಗಲೇ ಪ್ರಜಾನತ್ರ ಚೆನ್ನಾಗಿ ಆಗಿರುತ್ತದೆ. ನಾವು ನೀವು ಎಲ್ಲರೂ ಭುಜಕ್ಕೆ ಭುಜಕೊಟ್ಟು ಕೆಲಸ ಮಾಡಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ನಾವು ನಿಮ್ಮ ಜೊತೆ ಬರೀ ಕೈ ಎತ್ತಬೇಕು ಅಂತ ಹೇಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಹಾಗೆ ಹೇಳಿಲಿಲ್ಲ. ಸಮಸ್ಯೆ ಒಂದು ದಿವಸಕ್ಕೆ ಒಂದು ವರ್ಷಕ್ಕೆ ಅಥವಾ ಒಂದು ದಶಕಕ್ಕೆ ಕೊನೆ ಆಗುವುದಿಲ್ಲ. ಆರ್ಥಿಕ ಸಾಮಾಜಿಕ ಸಮಸ್ಯೆಗಳು ಏನು ಇವೆ, ಇವು ಬೆಳೆಯತಕ್ಕ ದೇಶದಲ್ಲಿ ಒಂದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಹೋದರೆ, ಮತ್ತೆ ಹತ್ತು ಸಮಸ್ಯೆಗಳು ಬರುತ್ತವೆ. ಅದು ತಮಗೂ ಗೊತ್ತಿದೆ. ಇದು ಸ್ವಾಭಾವಿಕ.

Sri H. D. DEVE GOWDA.—then it is not a developing Contry, it is distributing country.

Sri H. M. CHANNABASAPPA.—I would appeal to you to understand my statement in the correct perspective. ಬೆಳೆಯತಕ್ಕ ದೇಶದಲ್ಲಿ ಸಮಸ್ಯೆಗಳು ಉದ್ಭವವಾಗತಕ್ಕದ್ದು ಸ್ವಾಭಾವಿಕ. ನಮಗೂ ಕೂಡ ಬೇಗ ಬೇಗ ಡೆವಲಪ್ ಆಗಬೇಕೆಂಬ ಆಸೆ ಆಕಾಂಕ್ಷೆ ಇವೆ ಆ ಕಡೆ ಮತ್ತು ಈ ಕಡೆ ಸದಸ್ಯರಿಗೆ ಆದು ಇರತಕ್ಕದ್ದು ಸ್ವಾಭಾವಿಕ. ಈ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಬೇಕಾದಂತ ಸಾಧನ ಸಂಪತ್ತುಗಳನ್ನು ನಾವು ನೀವು ಕೂಡ ಸರಿಯಾದ ರೀತಿಯಲ್ಲಿ ಒದಗಿಸಿಕೊಡಬೇಕು. ಆದರೂ ಒಂದು ಯೋಜಿತ ಮಾರ್ಗದಲ್ಲಿ ನಡೆಯಬೇಕಾದ್ದು ಅವಶ್ಯಕ. ಇಲ್ಲದೆ ಹೋದ ಪಕ್ಷದಲ್ಲಿ ''ಎತ್ತು ಏರಿಗೆ ಎಳೆಯುತುಕೋಣ ನೀರಿಗೆ ಎಳೆಯಿತು'' ಎಂಬ ಗಾದೆಯಂತೆ ಆಗುತ್ತದೆ. ಆದುದರಿಂದ ಆ ಕಡೆ ಜನ ಈ ಕಡೆ ಜನ ಎಲ್ಲರೂ ಸೇರಿ ಸಮಸ್ಯೆಗಳನ್ನು ಸುಲಭ ರೀತಿಯಲ್ಲಿ ಬಗೆಹರಿಸಿ, ಸುಲಭರೀತಿಯಲ್ಲಿ ಪ್ರಗತಿ ಆಗುವುದಕ್ಕೆ ನಾವು ನೀವು ಸಹಕರಿಸಬೇಕು ಎನ್ನುವ ವಿಷಯದಲ್ಲಿ ನಿಮ್ಮದು ಬಿನ್ನಾಭಿಪ್ರಾಯ ಇರಲಾರದು. ಯಾವ ವಿಷಯದಲ್ಲಿ ಮಾತನಾಡಬೇಕಾದರೂ, ಅದನ್ನು ಗುರಿಯಾಗಿಟ್ಟುಕೊಂಡು ಮಾತನಾಡಬೇಕು, ಪ್ರತಿಯೊಂದು ಕೆಲಸ ಮಾಡಬೇಕು. ಪ್ರತಿಯೊಂದರಲ್ಲಿಯೂ ಸರ್ಕಾರವೇ ಆಗಲೀ ವಿರೋಧಪಕ್ಷವೇ ಆಗಲಿ ಪ್ರತಿಯೊಂದು ವಿಷಯಕ್ಕೂ ಕೂಡ ರಾಜಕೀಯ ಬಣ್ಣ ಕೊಡತಕ್ಕದ್ದು ಸರಿಯಲ್ಲ. ಹಾಗೆ ಬಣ್ಣ ಕಟ್ಟಿದರೂ ಕೂಡ ಅಪರಾದವಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ನೀವು ರಿಚ್ಯೆರ್ ಆದ ಮೇಲೆ ಪೊಲಿಟಿಕಲ್ ತೀಸಿಸ್ ಬರೆಯಿರಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗಲೇ ಬರೆಯುತ್ತೇನೆ. ಬರದರೆ ನೀವು ಓದುತ್ತೀರಾ ? ನೀವು ಟೀಕೆಟಿಪ್ಪಣಿಗಳನ್ನು ಮಾಡಿದಿರಿ ಎಂದು ನಮಗೆ ಕೋಪವೂ ಇಲ್ಲ, ಅನಹನೆಯೂ ಇಲ್ಲ. ಏಕೆಂದರೆ ನಿಮ್ಮ ಆಶೆಯೂ ಕೂಡ ಸರ್ಕಾರ ಇನ್ನಷ್ಟು ದಕ್ಷತೆಯಿಂದ, ಇನ್ನಷ್ಟು ಹೆಚ್ಚಿನ ಸಾಮರ್ಥ್ಯತೆಯಿಂದ, ಕೆಲಸಮಾಡಿ, ಇನ್ನೂ ಕೆಲವು ಕಾಲ ಅವರಿಂದ ಸೇವೆ ಸಲ್ಲಲಿ ಎಂಬ ಸದುದ್ದೇಶದಿಂದ ಟೀಕೆ ಮಾಡಿದ್ದೀರೆಂದು ನಾನು ತಿಳಿದುಕೊಂಡಿದ್ದೇನೆ ಮಾನ್ಯ ಸದಸ್ಯರಿಂದ ಟೀಕೆಟಿಪ್ಪಣಿಗಳನ್ನು ಸ್ವೀಕಾರ ಮಾಡಿ, ಅವರಿಂದ ಎಷ್ಟೊರಮಟ್ಟಿಗೆ ರಚನಾತ್ಮಕವಾದ ಸಲಹೆಗಳು ಬಂದಿವೆ ಅವೆಲ್ಲವನ್ನೂ ಕೂಡ ಕೃತಜ್ಞತೆಯಿಂದ ಸ್ವೀಕಾರ ಮಾಡುವುದರಲ್ಲಿ ಯಾವ ಅಡ್ಡಿಯೂ ಇಲ್ಲ. ರಾಜಕೀಯಕ್ಕೋಸ್ಕರ ವಾಗಿ ಕೆಲಸ ಮಾಡಬಾರದು ಅದು ಎಲ್ಲೆಲ್ಲಿ ಆಗುತ್ತದೆಯೋ ಅದನ್ನು ತಪ್ಪಿಸಬೇಕು ಅದನ್ನು

ತಪ್ಪಿಸುವುದಕ್ಕೆ ನೀವೂ ಪ್ರಯತ್ನ ಮಾಡಬೇಕು, ಜೊತೆಗೆ ನಾವೂ ಪ್ರಯತ್ನ ಮಾಡಬೇಕೆಂದು ಅರಿಕೆ ಮಾಡುತ್ತೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ.—ನೀವೇ ಮಾಡಿ ಬಂದಿದ್ದೀರಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಮ್ಮ ಶಿಷ್ಯರೇ ಹೀಗೆ ಹೇಳುವಾಗ ನಾನು ಏನು ಮಾಡಲಿ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಮುಖ್ಯಮಂತ್ರಿಗಳೂ ನಿಮ್ಮ ಶಿಷ್ಯರೇ. ಅವರ ಬುಡವನ್ನು ಕಡಿಯುವುದಕ್ಕೆ ಹೊರಟಿದ್ದಾರೆ ಎಂಬುದು ಗಮನಕ್ಕೆ ಬಂದಿದೆ.

ಶ್ರೀ ಎಚ್. ಎಂ ಚನ್ನಬಸಪ್ಪ.—ರಾಜಶೇಖರಮೂರ್ತಿಯವರು ಹೀಗೆ ಹೇಳುತ್ತಾರೆಂದು ನನಗೆ ತುಂಬಾ ಸಂತೋಷವಾಗಿದೆ. I do not take it amiss. Afterall the Hon. Member's objective and our objective is the same, but, the only thing is it requires a cereain amount of accommodation and united and co-operative efforts. ದೇವೇಗೌಡರವರು ಪ್ರತಿಪಕ್ಷದ ಲೀಡರ್, ಅವರು ಕೆಲವು ಮುಖ್ಯವಾದಂಥ ಅಂಶಗಳನ್ನು ಪ್ರಸ್ತಾಪ ಮಾಡಿ ನನಗೆ ಉತ್ತರ ಕೊಟ್ಟೇ ತೀರಬೇಕು ಎಂದು ಹೇಳಿದ್ದಾರೆ ಅವೆಲ್ಲವೂ ಕೂಡ ಕೇವಲ ಆಡಳಿತಕ್ಕೆ ಸಂಬಂಧಪಟ್ಟಿದ್ದಾದರೂ ಅವರು ಕೇಳಿದ ಮೇಲೆ ಉತ್ತರ ಕೊಡಲಿಲ್ಲ ಎಂದರೆ ಅಪಾರ್ಥಕ್ಕೆ ಎಡೆ ಆದೀತೆಂದು ಹೇಳಿ ಇಲ್ಲೆ ಉತ್ತರವನ್ನು ಕೊಡುತ್ತಿದ್ದೇನೆ. ಒಂದನೆಯದು murders that took place for the last three years ;

(2) Number of clashes between Harijans and Savarniyas Hindus forthe last three years ; (3) Action taken in the case of murder of a woman in Gulbarga ;

(4) Action taken in tne case of Harijan leader in Hoskote Taluk and (5) Action taken on the following cases :

(i) Rowdism among students ;

(ii) Rowdism among students at, Bhardravathi Mysore, Bangalore and Hubli.

ಇಷ್ಟು ವಿಷಯಗಳನ್ನು ನಾನು ಹೇಳಿಯೇ ತೀರಬೇಕು. ಬಹುಷಃ ಇದನ್ನು ಗೃಹಮಂತ್ರಿಗಳು ಗೃಹಶಾಖೆಗೆ ಸಂಬಂಧಪಟ್ಟ ಡಿಮ್ಯಾಂಡ್‌ಗಳನ್ನು, ಬಜೆಟ್‌ಗಳನ್ನು ಚರ್ಚೆ ಮಾಡುವಾಗ ಉತ್ತರಗಳನ್ನು ಕೊಡತಕ್ಕದು ಸಹಜ ಮತ್ತು ಸ್ವಾಭಾವಿಕವಾದುದ್ದು. ಆದರೆ ಗೌರ್ನರ್‌ರವರು ಮಾಡಿದಂಥ ಭಾಷಣಕ್ಕೆ ಉತ್ತರವಾಗಿ ಈಗಲೇ ಕೊಡಬೇಕು ಎಂದು ಹೇಳಿದಮೇಲೆ ಅವರು ಹೇಳಿದ್ದನ್ನು ಪ್ರತಿಭಟಿಸಬೇಕು ಎಂದು ಇಚ್ಛೆ ಇಲ್ಲ. ಅವರು ಹೇಳಿದ್ದಕ್ಕೆ ಉತ್ತರ ಕೊಡಬೇಕೆಂಬ ಸೌಜನ್ಯದಿಂದ ಇಲ್ಲಿ ಉತ್ತರವನ್ನು ಕೊಡುತ್ತಿದ್ದೇನೆ. ಇಲ್ಲದಿದ್ದರ ಅವತ್ತೆ ಗೃಹಮಂತ್ರಿಗಳು ಉತ್ತರ ಕೊಡಬೇಕಾಗಿತ್ತು Numebr of Murder cases that took place in the last three years ಎಂದು ಕೇಳಿದ್ದಾರೆ. 1972ರಲ್ಲಿ 684 ಇದೆ. 1973ರಲ್ಲಿ 712ಇದೆ. 1974ರಲ್ಲಿ 782 ಇದೆ. ಇದು ಮೂರು ವರ್ಷದಲ್ಲಿ ನಡೆದಿರತಕ್ಕದ್ದು.

Sri M. RAJASHEKARA MURTHY.—It is on the incraese.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಹೆಚ್ಚಾಗುತ್ತದೆ, ನಂತರ ಕಡಿಮೆಯಾಗುತ್ತದೆ. 1964ರಲ್ಲಿ 703 ಆಯಿತು. 1965ರಲ್ಲಿ 757 ಆಯಿತು. 1966ರಲ್ಲಿ 753 ಆಯಿತು. ಆಮೇಲೆ ಅದು 680ಕ್ಕೆ ಇಳಿಯಿತು. ಆದ್ದರಿಂದ ಏನಾಹೇರು ಎನ್ನತಕ್ಕದ್ದು ಅಪರಾಧಗಳು ಯಾವರೀತಿ ನಡೆಯುತ್ತವೆ ಅವುಗಳ ಆಧಾರದ ಮೇಲೆ ಹೋಗುತ್ತದೆಯೇ ಹೊರತು ಎಷ್ಟು ಇಳಿದಿದೆ ಮತ್ತು ಏರುತ್ತದೆ ಎನ್ನುವುದರ ಮೇಲೆ ಹೋಗುವುದಿಲ್ಲ.

ಶ್ರೀ ಎಂ. ರಾಜಶೇಖರಮೂರ್ತಿ.—ಈಗ ಏರುತ್ತಾ ಇದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—1967ರಲ್ಲಿ 680 ಆಯಿತು. ಏಕ್‌ದಮ್ 739ಕ್ಕೆ ಏರಿತು. ಇದಕ್ಕೆ ಕಾರಣ ಏನು ಎಂದು ಕೇಳಿದರೆ ಹೇಗೆ ? ಇದರ ಮೇಲೆ ಟೀಕೆ ಮಾಡಿ ಪ್ರಯೋಜನ ಇಲ್ಲ, Number of clashes in the Harijans and Savarniya Hindus ಎಂದು ಕೇಳಿದ್ದಾರೆ ಇದು ಏನಾಗಿದೆ ಎಂದರೆ ಒಂದು ಚಟವಾಗಿ ಬಂದು ಬಿಟ್ಟಿದೆ, ಇದರಲ್ಲಿ ಹರಿಜನರಿಗೂ ಸವರ್ಣೀಯು

ಹಿಂದೂಗಳಿಗೂ ವ್ಯಾಜ್ಯಗಳು ಗುಂಪುಗುಂಪಾಗಿ ಅವರಿಗೆ ಬೇರೆಯಾಗಿ, ಇವರಿಗೆ ಬೇರೆಯಾಗಿ ಕಲಹ ನಡೆಯುವುದು ಅಪರೂಪ. ಅಕಸ್ಮಾತ್ ಅದರಲ್ಲಿ ಹರಿಜನರೂ ಸೇರಿದ್ದರು. ಸವರ್ಣೀಯರು ಅವರ ಮೇಲೆ ಯುದ್ಧ ಮಾಡಿದರು. ಹೀಗೆ ಕಾಕ್ ಅಂಡ್ ಬುಲ್ ಸ್ಟೋರಿ ಕಟ್ಟುತಕ್ಕದ್ದು ಹೆಚ್ಚಾಗಿಬಿಟ್ಟಿದೆ. ಇದು ತಪ್ಪು ಎಂದು ನಾನು ಅವತ್ತೇ ಹೇಳಿದ್ದೇನೆ. ಹೋಸಕೋಟೆಯಲ್ಲಿ ವ್ಯಾಜ್ಯ ಆಯಿತು. ಆ ಕಡೆ ಹರಿಜನರೂ ಇದ್ದಾರೆ, ಸವರ್ಣೀಯ ಹಿಂದೂಗಳೂ ಇದ್ದಾರೆ. ಈ ಕಡೆ ಸವರ್ಣೀಯ ಹಿಂದೂಗಳೂ ಇದ್ದಾರೆ, ಹರಿಜನರೂ ಇದ್ದಾರೆ. ಆದ್ದರಿಂದ ಪ್ರಚೋದನೆ ಮಾಡುವುದು ಸರ್ಕಾರಕ್ಕೆ ಒಳ್ಳೆಯದು ಆಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ನಿಮ್ಮಲ್ಲಿ ಇದರಲ್ಲಿ ಯಾವ ಮಂತ್ರಿಗಳೂ ಇಲ್ಲವೇ ? I sahll I quote instances ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹರಿಜನರಿಗೂ ಸವರ್ಣೀಯ ಹಿಂದೂಗಳಿಗೂ ಯುದ್ಧ ಆಯಿತು ಹರಿಜನರು ಯಾರಿದ್ದಾರೆ ಅವರು ಏಟು ತಿಂದರು ಎಂದು ನೀವೇ ನೋಟೀಸ್ ಕಳಿಸಿದ್ದೀರಿ. ಫ್ಯಾಕ್ಟ್ ಏನು ಇವೆ, ವಾಸ್ತವಾಂಶ ಏನು ಇವೆ ಎಂದರೆ ಹರಿಜನರೂ ಗಿರಿಜನರೂ ಅದರಲ್ಲೆ ಸೇರಿಕೊಂಡಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ. — ಕ್ಯಾಬಿನೆಟ್ ಮಂತ್ರಿಗಳು ಸ್ಟೇಟ್‌ಮೆಂಟ್ ಕೊಡುತ್ತಾರೆ ಎಂದು ನಾವು ಕೇಳಿರುವುದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಚಟ ಏನು ಇದೆ, ಈ ಮಾರ್ಗ ದೇಶಕ್ಕೆ ಒಳ್ಳೆಯದಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಅವರಿಗೆ ಹೇಳಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರಿಗೂ ಹೇಳುತ್ತೇನೆ, ನಿಮಗೂ ಹೇಳುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಯಾರು ಹರಿಜನರನ್ನು ಉದ್ಧಾರ ಮಾಡುವ ಖಾತೆಯನ್ನು ವಹಿಸಿಕೊಂಡಿದ್ದಾರೆ ಅವರಿಗೆ ಮೊದಲು ಹೇಳಿ. ಅವರಿಗೆ ಚಟ ಇದೆ ನಮಗೆ ಚಟ ಇಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಪುಟ್ಟಸ್ವಾಮಯ್ಯನವರಿಗೆ ಸರ್ರನೆ ಹೇಳಬೇಕು ಎನ್ನುವ ಉತ್ಸಾಹ ಬರುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ವರ್ಗದ ಕಲಹ ಎಂದು ಅವರು ಶುರು ಮಾಡುತ್ತಾರೆ. ದೇವೇಗೌಡರು ಇಂತಿಂಥ ಕಡೆ ಹೇಳಿಕೆ ಕೊಟ್ಟಿದ್ದಾರೆಂದು ಹೇಳಲಿ.

ನಿಮ್ಮ ಮಂತ್ರಿಗಳು ಎಲ್ಲೆಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಮಂತ್ರಿಗಳು ಈ ನೆಲೆಯಿಂದ ನಿರ್ಗಮನ ಮಾಡಿರುವ ಮಟ್ಟಿಗೆ ಪೊಲೀಸ್ ರಕ್ಷಣೆ ಕೊಡುವುದು ಅಷ್ಟೇ ನಿದರ್ಶನ ನನ್ನಲ್ಲಿ ಇದೆ. ವರ್ಗದ ಕಲಹದಿಂದ ಆಗುವ ರಾಜಕೀಯ ಶೋಷಣೆ ಬಿಡಿ ಎಂದು ಅವರಿಗೆ ಹೇಳಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ವರ್ಗದ ಕಲಹಕ್ಕೆ ಯಾರು ಪ್ರಚೋದನೆ ಮಾಡಿದರೂ ತಪ್ಪಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ನಂಜಪ್ಪಗೌಡರು ಇದ್ದಾರೆ. ಅವರ ಭಾಷಣ ಕೇಳಲಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಪ್ರತಿಯೊಬ್ಬರ ಭಾಷಣ ತೆಗೆದುಕೊಂಡು ಟೀಕೆ ಮಾಡುವುದಕ್ಕೆ ನಾನು ಹೊರಟಿಲ್ಲ. ಇಲ್ಲಿ ಬಂದಿರತಕ್ಕ ಕಾಲಿಂಗ್ ಅಟೆನ್‌ಷನ್ ನೋಟೀಸ್ ತಾವು ಏನು ಕಳಿಸಿದ್ದೀರಿ, ಹರಿಜನರಿಗೆ ಹಾಗೆ ಆಯಿತು ಹೀಗೆ ಆಯಿತು ಎಂದು ಅದರ ಮೇಲೆ ಹೇಳುತ್ತೇನೆ. ವರ್ಗದ ಕಲಹಗಳನ್ನು ಪ್ರಚೋದನೆ ಮಾಡುವುದೇ ಆಗಲಿ ಯಾವರೀತಿಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಬೆಂಬಲ ಮಾಡತಕ್ಕದ್ದು ಯಾರಿಗೂ ಸರ್ವ ಸಮಾಧಾನ ಅಲ್ಲವೆಂದು ಹೇಳುತ್ತಿದ್ದೇನೆ. Action taken on the murder case of woman at Gulbarga and clashes between Harijans and Savarniya Hindus ಎಂದು ಕೇಳಿದ್ದಾರೆ. ಹರಿಜನರು ಮತ್ತು ಸವರ್ಣೀಯರು ಪ್ರತ್ಯೇಕ ಪ್ರತ್ಯೇಕವಾಗಿ ಎಲ್ಲೆಲ್ಲಿ ವ್ಯಾಜ್ಯ ಮಾಡಿದ್ದಾರೆ ಎನ್ನುವ ಬಗ್ಗೆ ವಿಷಯ ಸಂಗ್ರಹ ಮಾಡುವುದಕ್ಕೆ ಸ್ವಲ್ಪ ಕಾಲ ಬೇಕಾಗುತ್ತದೆ. ಗುಲ್ಬರ್ಗದಲ್ಲಿ ಹರಿಜನ ಹೆಣ್ಣುಮಗು ಸತ್ತುಹೋಗಿದ್ದು ಅದರ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳಲಿಲ್ಲ ಎನ್ನುವ ಅರ್ಥ ಬರುವ ರೀತಿಯಲ್ಲಿ ಹೇಳಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ರಿಪಬ್ಲಿಕನ್ ಪಾರ್ಟಿಯ ಧರಣಿ ಎಂದು ಗೊತ್ತಾದ ಮೇಲೆ ಮಾಡಿದರೆ.....

Sri H. M. CHANNABASAPPA.—Law must take its own course. ಆ ಕೇಸ್ ಇವತ್ತು ಸೆಷನ್ಸ್‌ಗೆ ಕಮಿಟ್ ಆಗಿದೆ.

Sri H. D. DEVE GOWDA.—The Government has created a special post to protect these people. I agree. But, when incident took place, no arrest was made. ರಿಪಬ್ಲಿಕನ್ ಪಾರ್ಟಿ ಮತ್ತು ಬೇರೆ ಬೇರೆ ಪಾರ್ಟಿಗಳು, ರಾಜಕೀಯ ಪಕ್ಷಗಳು 4-6 ದಿನ ಧರಣಿ ಮಾಡಿದರು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ನಿಮ್ಮ ಒಂದು ಇನ್‌ಫರೆನ್ಸ್. ಕೊರೆ ಆಯಿತು ಎಂದರೆ ಧರಣಿ ಕೂಡುವುದೇ ?

ಶ್ರೀ ಎಚ್. ಡಿ. ದೇವೇಗೌಡ.—ಅಲ್ಲಿನ ಅಧಿಕಾರಿಗಳು ಕೆಲಸವನ್ನು ಮಾಡತಕ್ಕದ್ದರಲ್ಲಿ ಜೊಕ್ಕಟವಾಗಿ ಮಾಡದೆ ಜನ ಅತ್ಯಪಿಯನ್ನು ವ್ಯಕ್ತಪಡಿಸಿದ ಮೇಲೆ ಬೆಂಗಳೂರಿನಿಂದ ವಿಶೇಷ ಅಧಿಕಾರಿಗಳನ್ನು ಕಳುಹಿಸಿ ಎನ್‌ಕ್ವೈರಿ ಮಾಡಿಸಿ ಆ ಮೇಲೆ ಡಾಜ್ ಷೀಟ್ ಹಾಕಿದ್ದಾರೆ.

Sri H. M. CHANNABASAPPA.—The responsibility to maintain the public morale is not only on us, it is as much on you also.

ಶ್ರೀ ಕೆ. ಎನ್. ವೀರಪ್ಪಗೌಡ.—ಮಾನ್ಯ ವಿರೋಧಪಕ್ಷದ ನಾಯಕರು ಹರಿಜನರ ಕೊರೆ ಆಗಿರುವುದರ ಬಗ್ಗೆ ಕೆಲವು ವಿವರಗಳನ್ನು ಕೇಳುತ್ತಿದ್ದಾರೆ. ಅವರೇ ಜಾತಿಯ ಬಗ್ಗೆ ಕೇಳುತ್ತಿದ್ದಾರೆ. ಈ ದೇಶದಲ್ಲಿ ಕೊರೆಗಳಾಗುತ್ತವೆ. ಇಂಥಿಂಥ ಕಡೆ ಕೊರೆಯಾಗಿದೆ ಇಂಥ ವ್ಯಕ್ತಿಯ ಕೊರೆಯಾಗಿದೆ ಎಂದು ಹೇಳದೆ ಜಾತಿಯನ್ನು ಹೇಳಿ ಅದರಲ್ಲೂ ವಿಶೇಷವಾಗಿ ಹರಿಜನರ ವಿಚಾರವನ್ನು ಹೇಳುತ್ತಿದ್ದಾರೆ. ಹೀಗೆ ಮಾಡಬಹುದೇ ?

ಶ್ರೀ ಎಚ್. ಡಿ. ದೇವೇಗೌಡ.—ನೀವು ಮಾಡಿರುವ ತಪ್ಪನ್ನು ನಿಮಗೆ ತೋರಿಸಿಕೊಡುತ್ತ ಇದ್ದೇನೆ. ಹರಿಜನರಿಗಾಗಿ ಒಂದು ಸ್ಪೆಷಲ್ ಪೋಸ್ಟ್ ಆಯೇಟ್ ಮಾಡಿ ಅವರಿಗೆ ರಕ್ಷಣೆ ಕೊಡುತ್ತೇವೆಂದು ಹೊಸಹುದ್ದೆಯನ್ನು ನಿರ್ಮಾಣ ಮಾಡಿರುವುದರಿಂದ ಆ ಹುದ್ದೆಯನ್ನು ನಿರ್ಮಾಣ ಮಾಡಿದ ಮೇಲೆ ಏನೇನು ಘಟನೆಗಳು ನಡೆದಿವೆ ಎಂದು ಕೇಳಿದ್ದೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಹರಿಜನರು ಮತ್ತು ಗಿರಿಜನರಿಗೆ ರಾಜ್ಯಾಂಗದ ಪ್ರಕಾರ ಕೆಲವು ರಕ್ಷಣೆಗಳಿವೆ. ನಾವೆಲ್ಲರೂ ಅದನ್ನು ರೆಕಗ್ನೈಸ್ ಮಾಡಿ ಅವರ ಬೆಳವಣಿಗೆಗೆ ವಿಶೇಷ ವ್ಯವಸ್ಥೆಯನ್ನು ಮಾಡಬೇಕು. ಅದಕ್ಕಾಗಿ ಮಾಡಿದೆ.

ಶ್ರೀ ಎಚ್. ಡಿ. ದೇವೇಗೌಡ.—ಹರಿಜನ ಗಿರಿಜನರ ಬಗ್ಗೆ ತಪ್ಪು ಮಾಡುವ ಯಾವುದೇ ಜಾತಿಯವನು ಇರಲಿ, ಯಾವುದೇ ಅಧಿಕಾರಿ ಇರಲಿ ಶಿಕ್ಷೆ ಮಾಡಬೇಕು ಎಂದು ವಿಶೇಷವಾಗಿ ಒಬ್ಬ ಪೋಲೀಸ್ ಅಧಿಕಾರಿಯನ್ನು ನೇಮಕ ಮಾಡಿದ್ದೀರಲ್ಲ, ಅದಕ್ಕಾಗಿ ಹೇಳುತ್ತಿದ್ದೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರು ಬಡವರು. ಅವರಿಗೆ ಕೋರ್ಟಿನಲ್ಲಿ ಅನ್ಯಾಯವಾದರೆ ಅವರಿಗೆ ರಕ್ಷಣೆ ಕೊಡುವುದಕ್ಕೆ, ಅವರಿಗೆ ಲೀಗಲ್ ಹೆಲ್ಪ್ ಕೊಡುವುದಕ್ಕೆ ವ್ಯವಸ್ಥೆ ಮಾಡಿದೆ. ಅದು ಯೋಗ್ಯವಾದುದು ಎಂಬುದನ್ನು ನಾವು ನೀವು ಎಲ್ಲರೂ ಒಪ್ಪಬೇಕು. ಗುಲ್ಬರ್ಗ ಕೇಸು ಸೆಷನ್ ಕೋರ್ಟಿನಲ್ಲಿ ಇರುವುದರಿಂದ ಆ ಬಗ್ಗೆ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ. Then action taken in the following cases :—Rowdism on student at Mysore and Bhadravathi, and rowdism on students at Hubli and Bangalore.

ಇದು ಒಂದು ಸೆನ್ಸಿಟಿವ್ ಸೆಕ್ಟಾರ್. ವಿದ್ಯಾರ್ಥಿಗಳು ಮುಂದಿನ ಭವಿಷ್ಯದಲ್ಲಿ ದೇಶದ ನತ್ಪ್ರಜೆಗಳಾಗತಕ್ಕ ಜನ. ಅವರ ಬೆಳವಣಿಗೆ ಈಗಿನಿಂದಲೇ ಸಮರ್ಪಕವಾಗಿ ಆಗಿ ಅವರು ನತ್ಪ್ರಜೆಗಳಾಗಿ ಆಗುವುದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡುವುದು ನಮ್ಮ ಜವಾಬ್ದಾರಿ. ನಾವು ನೀವು ಎಲ್ಲರೂ ಸೇರಿ ವಿದ್ಯಾರ್ಥಿಗಳಲ್ಲಿರತಕ್ಕ ಶಕ್ತಿ, ಸಾಮರ್ಥ್ಯವನ್ನು ಚೆನ್ನಾಗಿ ಬೆಳೆಸಿ ಅವರು ಮುಂದೆ ನತ್ಪ್ರಜೆಗಳಾಗುವುದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡತಕ್ಕ ಜವಾಬ್ದಾರಿ ನಮಗೂ ಮತ್ತು ನಿಮಗೂ ಇಬ್ಬರಿಗೂ ಇದೆಯೋ ಇಲ್ಲವೋ ? ವಿದ್ಯಾರ್ಥಿಗಳ ಶಕ್ತಿ ಸಾಮರ್ಥ್ಯಗಳನ್ನು ಯಾರೂ ಕೂಡ ರಾಜಕೀಯಕ್ಕೆ ಉಪಯೋಗ ಮಾಡಿಕೊಳ್ಳತಕ್ಕದ್ದು ತಪ್ಪಬೇಕು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಇಂದಿರಾ ಬ್ರಿಗೇಡ್ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇವರು ಅವರು ಎಂದು ಪಕ್ಷಪಾತ ಮಾಡಿ ಹೇಳುತ್ತಿಲ್ಲ. ಇದು ತಪ್ಪಬೇಕು. ಇದು ತಪ್ಪದೆ ಹೋದರೆ ಮುಂದಿನ ಭವಿಷ್ಯ ಹಾಳಾಗುತ್ತದೆ ಎಂದು ಮಾತ್ರ ಈ

ನಂದರ್ಭದಲ್ಲಿ ಹೇಳಬೇಕೆಂದಿದ್ದೇನೆ. ನೀವು ಮಾಡಿದರೆ ಒಳ್ಳೆಯದು, ನಾವು ಮಾಡಿದರೆ ಕೆಟ್ಟದ್ದು ಎಂದು ಹೇಳುವುದಿಲ್ಲ, ಯಾರು ಮಾಡಿದರೂ ಕೆಟ್ಟದ್ದೇ. ಇದು ಮುಂದಿನ ಭವಿಷ್ಯದಲ್ಲಿ ದೇಶಕ್ಕೆ ಅಪಘಾತ ತರತಕ್ಕ ವಿಷಯ.

ವಿದ್ಯಾರ್ಥಿಗಳಿಗೆ ಏನಾದರೂ ತೊಂದರೆಗಳಿದ್ದರೆ ಅವರಿಗೆ ಇರತಕ್ಕ ಸಮಸ್ಯೆಗಳೇನು, ಎನ್ನುವುದನ್ನು ನಾವು ಮನಗಂಡು ಅವುಗಳನ್ನು ಪರಿಹಾರ ಮಾಡುವುದಕ್ಕೆ ಚೀಫ್ ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಮಾಡಿ ಅದರಲ್ಲಿ ವಿದ್ಯಾ ಇಲಾಖೆಯಲ್ಲಿ ಸಂಬಂಧಪಟ್ಟ ಡೈರೆಕ್ಟರುಗಳನ್ನು ಹಾಕಿ ವಿದ್ಯಾರ್ಥಿಗಳ ಗ್ರೀವೆನ್ಸಸ್ ಏನಿವೆ ಅವುಗಳನ್ನು ತರಿಸಿ, ಅವುಗಳಲ್ಲಿ ಯಾವುದು ನ್ಯಾಯವಾಗಿದೆ ಅವುಗಳನ್ನು ತಕ್ಷಣ ಪರಿಹಾರ ಮಾಡಿ ವಿದ್ಯಾರ್ಥಿಗಳ ಗಮನ ವಿದ್ಯಾಭ್ಯಾಸದ ಮೇಲೆ ಇರುವಂತೆ ಮಾಡಬೇಕು ಎನ್ನುವ ನದಾಶಯವನ್ನು ಹೊಂದಿದ್ದು ಸರ್ಕಾರ ಆದನ್ನು ಮಾಡುತ್ತಿದೆ.

ಹುಬ್ಬಳ್ಳಿ, ಮೈಸೂರು, ಮತ್ತು ಬೆಂಗಳೂರಿನಲ್ಲಿ ನಡೆದಿರುವಂತಹ ಘಟನೆಗಳ ಬಗ್ಗೆ ಎಲ್ಲ ವಿವರಗಳು ನನ್ನ ಹತ್ತಿರವಿದೆ. ಅವುಗಳನ್ನೆಲ್ಲಾ ಇಲ್ಲಿ ಹೇಳುವುದಕ್ಕೆ ನನ್ನ ಅಡ್ಡಿಯೇನೂ ಇಲ್ಲ. ಆದರೆ ನನ್ನ ಒಂದು ಕೋರಿಕೆ ಏನೆಂದರೆ, ಈ ವಿಚಾರದಲ್ಲಿ ಪ್ರಚೋದನೆ ಮಾಡಿಕೊಂಡು ಹೋಗುವುದರ ಬದಲು ನಾವು ಮತ್ತು ನೀವು ಒಂದು ತೀರ್ಮಾನವನ್ನು ದೇಶದ ಹಿತದೃಷ್ಟಿಯಿಂದ ತೆಗೆದುಕೊಳ್ಳಬೇಕು. ಈ ಬಗ್ಗೆ ನನ್ನ ಒಂದು ಸಲಹೆ ಏನೆಂದರೆ, ಮುಂದಿನ ಜನಾಂಗವನ್ನು ಬೆಳೆಸುವ ವಿಚಾರದಲ್ಲಿ ನಾವು ನೀವು ಮತ್ತು ಹೊರಗಿನವರು ಅವರಿಗೆ ಸರಿಯಾದಂಥ ರೀತಿಯಲ್ಲಿ ಟ್ರೈನಿಂಗ್ ಕೊಡಬೇಕು. ಈ ಒಂದು ಜವಾಬ್ದಾರಿ ಸರ್ಕಾರದ ಮೇಲೆ, ಶಾಸನಕರ ಮೇಲೆ ಮತ್ತು ವಿದ್ಯಾರ್ಥಿಗಳ ತಂದೆತಾಯಿಗಳ ಮೇಲೆ ಇದೆ. ಅದನ್ನು ನಾವುಗಳು ಮಾಡದಿದ್ದರೆ ಯಾರಿಗೋಸ್ಕರ ನಾವು ಇಷ್ಟೆಲ್ಲಾ ಶ್ರಮಪಡುತ್ತಿರುವುದು ? ಮಾನ್ಯ ದೇವೇಗೌಡರು ಎತ್ತಿದಂಥ ವಿಷಯಗಳು ಗಹನವಾಗಿದ್ದರೂ ಸಹ, ನೂಕ್ಷ್ಮವಾಗಿ ವಿಷಯ ಏನಿದೆ ಎಂಬ ಬಗ್ಗೆ ಮಾರ್ಮಿಕವಾಗಿ ಹೇಳಿದ್ದಾರೆ. ಅವರು ಆ ರೀತಿ ಹೇಳಿದ್ದರಲ್ಲಿ ಒಂದು ಬೆಲೆ ಇದೆ. ಅದನ್ನು ಎಲ್ಲರೂ ಅರಿತುಕೊಳ್ಳಬೇಕು.

ಇನ್ನು ಮಾನ್ಯ ನದಸ್ಯರು ಮಾತನಾಡುವಾಗ ರಸ್ತೆಗಳು, ವಿದ್ಯುಚ್ಛಕ್ತಿ, ಕುಡಿಯುವ ನೀರಿನ ವಿಷಯಗಳ ಬಗ್ಗೆ ಹೇಳಿದ್ದಾರೆ. ರಸ್ತೆಗಳು ಆಗಬೇಕು, ಕುಡಿಯುವ ನೀರಿನ ವ್ಯವಸ್ಥೆ ಎಲ್ಲ ಕಡೆ ಆಗಬೇಕು. ಆದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಅದರೆ ನಮ್ಮ ಶಕ್ತಿಸಾಮರ್ಥ್ಯವನ್ನು ಅಂದರೆ ಆರ್ಥಿಕ ಶಕ್ತಿಯನ್ನು ನೋಡಿಕೊಂಡು ಈ ಕೆಲಸಗಳನ್ನು ಪ್ರತಿವರ್ಷ ಸ್ವಲ್ಪಸ್ವಲ್ಪ ಮಾಡಿಕೊಂಡು ಹೋಗಬೇಕಾಗಿದೆ. ಎಲ್ಲವನ್ನೂ ಒಂದೇ ದಿವಸದಲ್ಲಿ ಮಾಡುವುದಕ್ಕಾಗುವುದಿಲ್ಲ. ಉದಾಹರಣೆಗೆ...

ಶ್ರೀ ಕೋಣಂದೂರು ಲಿಂಗಪ್ಪ.—ಅಶೋಕ ಹೊಟೇಲ್ ;

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂತಹ ಹೋಟೆಲ್‌ಗಳ ಆಗತ್ಯವಿಲ್ಲವೆಂದು ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಆ ರೀತಿ ಹೇಳತಕ್ಕಂಥವರು ಮಂತ್ರಿಮಂಡಲದಲ್ಲಿ ಒಬ್ಬರಾದರೂ ಇದ್ದೀರಲ್ಲ ;

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೊಟೇಲ್ ಅಶೋಕ, ಹೊಟೇಲ್ ಒಬೇರಾಯ್ ಇಂತಹ ಹೋಟೇಲ್‌ಗಳಿದ್ದರೆ ಫಾರಿನ್-ಎಕ್ಸ್‌ಚೇಂಜ್ ಬರುತ್ತದೆ ಎಂದು ಹೇಳತಕ್ಕಂಥ ಕೆಲವು ತಜ್ಞರಿದ್ದಾರೆ. ಆದರೆ ನಾನು ಈ ಬಗ್ಗೆ ನನ್ನ ಸ್ವಂತ ಅಭಿಪ್ರಾಯವನ್ನು ಈಗಾಗಲೇ ಹೇಳಿದ್ದೇನೆ. ಇಂತಹ ವಿಷಯಗಳು ಬಂದಾಗ ನಮ್ಮ ಶಕ್ತಿಸಾಮರ್ಥ್ಯವನ್ನು ಅನುಸರಿಸಿಕೊಂಡು ಹೋಗಬೇಕು. ಯಾವುದಕ್ಕೆ ಮೊದಲ ಸ್ಥಾನ ಕೊಡಬೇಕು, ಯಾವುದಕ್ಕೆ ಎರಡನೇ ಸ್ಥಾನ ಕೊಡಬೇಕು ಎಂದು ಯೋಚನೆ ಮಾಡಬೇಕು. ರಸ್ತೆಗಳು ಮತ್ತು ಕುಡಿಯುವ ನೀರಿನ ವಿಷಯಗಳು ಬಂದಾಗ ಕುಡಿಯುವ ನೀರಿಗೆ ಮೊದಲು ಪ್ರಾಧಾನ್ಯತೆ ಕೊಡಬೇಕು ಎಂದು ನಾನು ಈ ಸಭೆಯಲ್ಲಿ ವಿಷ್ಣ್ವೋ ನಲ ಹೇಳಿದ್ದೇನೆ. ಇದನ್ನು ಪ್ಲಾನಿಂಗ್ ಕಮಿಷನ್ ಅವರು ಯೋಚನೆ ಮಾಡಬೇಕು. ಈಗ ಅವರು ಒಂದು ಕ್ರಮವಾಗಿ ಪ್ರಾಧಾನ್ಯತೆ ಕೊಡುತ್ತಿಲ್ಲ. ನಾನು ಹೇಳಿದ ರೀತಿಯಲ್ಲಿ ಅವರು ಪ್ರಾಧಾನ್ಯತೆ ಕೊಟ್ಟರೆ ಎಲ್ಲ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ ; ಇಲ್ಲದಿದ್ದರೆ ಆಗುವುದಿಲ್ಲ. ರಸ್ತೆಗಳ ಬಗ್ಗೆ ನಾನು ಸ್ಪಷ್ಟವಾಗಿ ಹೇಳಿದ್ದೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ರಸ್ತೆಗಳ ರಿಪೇರಿಯನ್ನೇ ಮಾಡಿಸುತ್ತಿಲ್ಲ ;

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾವು ರಿಪೇರಿ ಮಾಡಿನದಿದ್ದರೆ ಎಲ್ಲ ರಸ್ತೆಗಳಲ್ಲಿಯೂ ಗುಂಡಿಗಳು ಬೀಳುತ್ತಿದ್ದವು. ನಾವು ರಿಪೇರಿ ಮಾಡಿನುತ್ತಿರುವುದರಿಂದಲೇ ನಾವು 60 ಮೈಲಿ

ಸ್ಪೀಡ್‌ನಲ್ಲಿ ಬೆಂಗಳೂರಿಗೆ ಬರುವುದಕ್ಕೆ ಸಾಧ್ಯವಾಗಿರುವುದು. ಈಗ ಇರಿಗೇಷನ್ ಪ್ರಾಜೆಕ್ಟ್ ಗೋಸ್ಕರ ಪವರ್ ಪ್ರಾಜೆಕ್ಟ್‌ಗೋಸ್ಕರ ಹೆಚ್ಚು ಹಣವನ್ನು ಒದಗಿಸಬೇಕೆಂಬ ಉದ್ದೇಶದಿಂದ ರಸ್ತೆಗಳ ರಿಪೇರಿಗೆ ಸ್ವಲ್ಪ ಹಣ ಖೋತ ಮಾಡಿರುವುದು ನಿಜ. ಇದನ್ನು ತಾವೂ ಸಹ ಒಪ್ಪುತ್ತೀರಿ. ಆದರೂ ಸಹ ಹಳ್ಳಿಗಳ ರಸ್ತೆಗಳಿಗೆ ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕೆಂಬ ಉದ್ದೇಶದಿಂದ ಅದರಲ್ಲಿ ಸ್ವಲ್ಪ ಮಟ್ಟಿಗೆ ರೀ-ಅಪ್ರೊಪ್ರಿಯೇಟ್ ಮಾಡಿ ಎರಡು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಮುಂದಿನ ವರ್ಷ ಮತ್ತಷ್ಟು ಹೆಚ್ಚಿಗೆ ಹಣವನ್ನು ಹಳ್ಳಿಗಳ ರಸ್ತೆಗಳಿಗೆ ಕೊಡಬೇಕು, ಆ ರಸ್ತೆಗಳಿಗೆ ಪ್ರಾಧಾನ್ಯತೆ ಕೊಡಬೇಕು ಎಂಬ ಅಭಿಪ್ರಾಯವಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಆಷ್ಟು ಹೊತ್ತಿಗೆ ಹಣಕಾಸಿನ ಇರಾಖೆ ಮಾನ್ಯ ಗುಂಡೂರಾಯರ ಕೈಗೆ ಹೋಗುತ್ತದೆಂಬ ವಿಷಯ ಜನಜನಿತವಾಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಕನಸು ಕಂಡಿರಬಹುದು ;

ಶ್ರೀ ಬಿ. ಪುಟ್ಟಸ್ವಾಮಯ್ಯ.—ತಾವು ಈ ಅಧಿವೇಶನ ಮುಗಿಯುವವರೆಗೆ ಮಂತ್ರಿಯಾಗಿರುತ್ತೀರೋ ಅಥವಾ ಇಲ್ಲವೋ ಗೊತ್ತಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಕನಸಿನಲ್ಲಿ ಕಂಡಿದ್ದನ್ನು ಇಲ್ಲಿ ಬಂದು ಏಕಾ ಏಕಿ ಹೇಳುತ್ತೀರಿ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಕನಸಿನಲ್ಲಿ ನನಗೆ ವೆಂಕಟರಮಣಸ್ವಾಮಿ ಸುದ್ದಿ ಕಳುಹಿಸುತ್ತಾನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿದ್ರಾವಸ್ಥೆಯಲ್ಲಿ ಕಂಡಂತಹ ವಿಷಯಗಳನ್ನು ಇಲ್ಲಿ ಹೇಳುವುದು ಬೇಡ ಎಂದು ನಾನು ಹೇಳುತ್ತೇನೆ. ರೂರಲ್ - ಕಮ್ಯೂನಿಕೇಷನ್ ರೋಡ್ಸ್‌ಗೆ ಬಡ್ಜೆಟ್‌ನಲ್ಲಿ ಹಣ ಒದಗಿಸುವಾಗ ಪರಿಶೀಲಿಸಬಹುದು, ಅದಕ್ಕೆ ಒಂದು ರೋಲಿಂಗ್ ಫಂಡ್ ಇರಬೇಕು ಎಂದು ಯೋಚನೆ ಮಾಡಿ ಮುಂದಿನ ವರ್ಷದಲ್ಲಿ ಹಳ್ಳಿಗಳ ರಸ್ತೆಗಳಿಗೆ ಒಂದು ಉತ್ತಮವಾದ ವ್ಯವಸ್ಥೆ ಮಾಡಬೇಕೆಂಬ ಆಸೆ ಇದೆ.

ಶ್ರೀ ಕೋಣಂದೂರು ಲಿಂಗಪ್ಪ.- ಮೂರು ವರ್ಷಗಳಿಂದಲೂ ಸಹ ಅದೇ ಮಾತನ್ನು ಹೇಳುತ್ತಿದ್ದೀರಿ. ಈ ವಿಚಾರದಲ್ಲಿ ಒಂದು ಮಾಸ್ಟರ್ ಪ್ಲಾನ್ ತಯಾರು ಮಾಡುತ್ತೇವೆ, ಮಯಾಬಜಾರೆ ಮಾಡಿಬಿಡುತ್ತೇವೆಂದು ಹೇಳುತ್ತಿದ್ದೀರಿ ; ಆದರೆ ಯಾವುದನ್ನೂ ಮಾಡಲಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿಮಗೆ ತಿಳಿಸದೆ ಯಾವ ಕೆಲಸವನ್ನೂ ಮಾಡುವುದಕ್ಕಾಗುವುದಿಲ್ಲ. ನನ್ನ ಮನಸ್ಸಿನಲ್ಲಿ ಏನಿದೆ ಎಂಬುದನ್ನು ತಮಗೆ ತಿಳಿಸಬೇಕಾಗುತ್ತದೆ. ಈ ಹಿಂದೆ ನಾನು ಈ ಬಗ್ಗೆ ಹೇಳಿದ್ದರಿಂದಲೇ ಇಂದು ಹಳ್ಳಿಗಾಡಿನಲ್ಲಿ ಸ್ವಲ್ಪಮಟ್ಟಿಗೆ ರಸ್ತೆಗಳ ಕೆಲಸವಾಗುತ್ತಿರುವುದು ; ಇನ್ನು ಮುಂದೆ ಇದು ಇನ್ನೂ ಹೆಚ್ಚುಹೆಚ್ಚು ಪ್ರಮಾಣದಲ್ಲಿ ಆಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ಮೊದಲಿದ್ದ ರಸ್ತೆಗಳಲ್ಲಿ ಗಾಡಿಗಳು ಹೋಗುತ್ತಿದ್ದವು ; ಈಗ ಅವುಗಳು ಸಹ ಹೋಗುವುದಕ್ಕೆ ಆಗುತ್ತಿಲ್ಲ ;

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದರಲ್ಲಿ ರಾಜಕೀಯ ಬೇಡ. ಕೆಲಸಕಾರ್ಯಗಳ ವಿಷಯದಲ್ಲಿ ರಾಜಕೀಯ ಬೇಡ. ಚುನಾವಣೆಯ ಸಮಯದಲ್ಲಿ ಬೇಕಾದರೆ ರಾಜಕೀಯ ಮಾಡಿ.

ಶ್ರೀ ಸಿ. ಬೈರೇಗಾಡ,—ಚುನಾವಣೆ ಸಮಯದಲ್ಲಿ ನಿಜವನ್ನೇ ಹೇಳಬೇಕಾಗುತ್ತದೆ ;

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಲ್ಲದಿದ್ದರೆ ಜನರು ಓಟು ಕೊಡುವುದಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮುಂದಿನ ಚುನಾವಣೆಯ ಸಮಯದಲ್ಲಿ ನೀವು ಮಾಡಿರುವ ಕಸುಬೇ ನಮಗೆ ಬಂಡವಾಳವಾಗಿದೆ. ಬೇರೆ ಬಂಡವಾಳ ಬೇಕಾಗಿಲ್ಲ.

ಉಪಾಧ್ಯಕ್ಷರು.- ಮಾನ್ಯ ಮಂತ್ರಿಗಳು ತಾವು ಮಧ್ಯ ಕೇಳುವುದಕ್ಕೆ ಒಪ್ಪದಿರುವಾಗ ತಾವು ಮಧ್ಯೆಮಧ್ಯೆ ಮಾತನಾಡುವುದು ಸರಿಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ನಾನು ಒಪ್ಪಿದ್ದೇನೆಂದು ತಿಳಿದುಕೊಂಡು ಅವರು ಮಾತನಾಡುತ್ತಾರೆ. ರೂರಲ್ ಕಮ್ಯೂನಿಕೇಷನ್ ರೋಡ್ಸ್ ವಿಷಯದಲ್ಲಿ ಸ್ವಲ್ಪಮಟ್ಟಿಗೆ ಹೆಚ್ಚಿನ ಅಭಿಮಾನ ಸರ್ಕಾರಕ್ಕಿದೆ. ಅದನ್ನು ಮಾಡಬೇಕೆಂದಿದ್ದೇವೆ. ಹೋದವರ್ಷ ರಸ್ತೆಗಳು ಕಟ್ಟಿದ್ದು ನಿಜ. ಅವುಗಳನ್ನು ಉತ್ತಮಪಡಿಸುವುದಕ್ಕೆ ಈ ವರ್ಷದಲ್ಲಿ ಸೂಕ್ತ ಕಾರ್ಯಕ್ರಮ ಕೈಕೊಂಡು ಹೆಚ್ಚಿನ ಕೆಲಸಗಳನ್ನು ನಡೆಸುವುದಕ್ಕೆ ಏರ್ಪಾಡು ಮಾಡುತ್ತೇವೆ.

ಇನ್ನು ಸೇತುವೆಗಳ ಕೆಲಸವನ್ನು ಸಹ ಕ್ಷಿಪ್ರ ಕಾಲದಲ್ಲಿ ಮುಗಿಸಬೇಕೆಂದಿದ್ದೇವೆ. ನೂರು ಅಡಿ ಉದ್ದವಿರುವಕತಹ ಸೇತುವೆಗಳ ಬಗ್ಗೆ ಒಂದು ಪಟ್ಟಿಯನ್ನು ಮಾಡಿ ಅವುಗಳನ್ನು ಕಟ್ಟಿಸಲು ಎಷ್ಟು ಹಣ ಬೇಕಾಗುತ್ತದೆಂಬುದನ್ನು ನೋಡಿಕೊಂಡು ಒಂದು ನಿಯಮಿತ ಕಾಲದಲ್ಲಿ ಅವುಗಳನ್ನು ಕಟ್ಟಿ ಮುಗಿಸಬೇಕೆಂದು ಸರ್ಕಾರ ಯೋಚನೆ ಮಾಡುತ್ತಿದೆ. ಅದಕ್ಕೆ ಸಾಧನ ಸಂಪತ್ತುಗಳನ್ನು ಒದಗಿಸಿಕೊಳ್ಳಬೇಕಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಬ್ರಿಡ್ಜ್ ಕಾರ್ಪೊರೇಷನ್.....

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದರ ವಿಷಯವೇ ನಾನು ಹೇಳುತ್ತಾ ಇರುವುದು. ಇದರಿಂದ ದೇಶಕ್ಕೆ ಒಳ್ಳೆಯದಾಗುತ್ತದೆ. ನೀವೆಲ್ಲರೂ ಇದಕ್ಕೆ ಸಹಕಾರ ಕೊಡಬೇಕು. ಮಾನ ದೇವೇಗೌಡರು ವನೂಲಿ ವಿಷಯ ಹೇಳಿದ್ದಾರೆ. ಅವರು ಏನು ಈ ವಸೂಲಿ ವಿಷಯದಲ್ಲಿ ತೊಂದರೆಗಳಿವೆ ಎಂದು ಹೇಳಿದ್ದಾರೆ, ಅವೆಲ್ಲವನ್ನೂ ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಕಾಳೀ ನದಿ ಯೋಜನೆ ವಿಷಯ ಹೇಳಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ಅನೇಕಸಾರಿ ಹೇಳಿದ್ದಾರೆ. ಕಾಳಿ ನದಿ ಯೋಜನೆಗೆ ಹಣವನ್ನು ಒದಗಿಸಲೇಬೇಕು, ಅದನ್ನು ಪೂರೈಸಲೇಬೇಕು ಎಂದು. ಇದರ ಬಗ್ಗೆ ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂಬುದನ್ನು ಡಿಮ್ಯಾಂಡ್ ಬಂದ ಕಾಲದಲ್ಲಿ ಎಲ್ಲ ವನ್ನೂ ವಿವರವಾಗಿ ತಿಳಿಸುತ್ತೇನೆ. ರಾಜ್ಯಪಾಲ ಭಾಷಣದಲ್ಲಿ ಆರ್ಥಿಕ ಸಾಮಾಜಿಕ ಮತ್ತು ನೈತಿಕ ಇವುಗಳಿಗೆ ಸಂಬಂಧಪಟ್ಟ ವಿಷಯ ಪ್ರಸ್ತಾಪ ಮಾಡುವುದು ಒಳ್ಳೆಯ ಸಂಪ್ರದಾಯ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಮೈಸೂರು, ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿ ಕ್ಷಾಮ ಇದೆ ಎಂದು ರಾಜ್ಯಪಾಲರು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಅದರ ಬಗ್ಗೆ ತಾವು ಏನು ಕಾರ್ಯ ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದೇ ನಮಗೂ ನಿಮಗೂ ಇರುವ ವ್ಯತ್ಯಾಸ. ಅವರು ಸೋಶಿಯಲ್, ಅಂಡ್ ಎಕನಾಮಿಕ್ ಪಾಲಿಸಿಸ್ ಬಗ್ಗೆ ಹೇಳಿದ್ದಾರೆ. ನೀವು ನಮ್ಮ ಊರಿನಲ್ಲಿ ಏನು ಇದೆ ಎಂದು ಕೇಳುತ್ತೀರಿ. These are things which should have been questioned during the debate on the Governor's Address. ಇದರ ಬಗ್ಗೆ ಸಕಾಲದಲ್ಲಿ ಸದ್ ಉತ್ತರವನ್ನು ಕೊಡುತ್ತೇನೆ. ಡಿಮ್ಯಾಂಡ್ ಬಂದ ಕಾಲದಲ್ಲಿ ಅಗತ್ಯವಾಗಿ, ಪೂರ್ಣವಾಗಿ ಚರ್ಚೆಮಾಡೋಣ. ಒಳ್ಳೆಯ ಸಂಪ್ರದಾಯವನ್ನು ಹಾಕಬೇಕು ಎನ್ನುವ ಉದ್ದೇಶ ದಿಂದ ಹೆಚ್ಚು ಕಾಲವನ್ನು ಸಣ್ಣ-ಪುಟ್ಟ ವಿಷಯಗಳಿಗೆ ಕೊಡದೆ ಆರ್ಥಿಕ, ಸಾಮಾಜಿಕ ನೀತಿಯನ್ನು ಏನು ಧೋರಣೆಯನ್ನು ನಮ್ಮ ಪರವಾಗಿ ರಾಜ್ಯಪಾಲರು ಕೊಟ್ಟಿದ್ದಾರೆ ; ಅದಕ್ಕೆ ತಮ್ಮ ಒಪ್ಪಿಗೆ ಯನ್ನು ನೀಡಿ, ತುಂಬು ಸಂತೋಷದಿಂದ ನಿರ್ಣಯ ಮಾಡಿ ಅವರಿಗೆ ವಂದನೆಗಳನ್ನು ಸಲ್ಲಿಸಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಬೇಡಿಕೆಗಳು ಬಂದಾಗ ಉತ್ತರ ಹೇಳುತ್ತೇನೆ ಎಂದು ತಾವು ಹೇಳುತ್ತಿದ್ದೀರಿ. ಹಾಸನ, ಮೈಸೂರು ಮತ್ತು ಮಂಡ್ಯ ಜಿಲ್ಲೆಯ ಕೆಲವು ಭಾಗಗಳಲ್ಲಿ ಮಳೆ ಯಾಗದೇ ತೊಂದರೆಯಾಗಿರತಕ್ಕದ್ದನ್ನು ರಾಜ್ಯಪಾಲರ ಭಾಷಣದಲ್ಲೂ ಹೇಳಿದ್ದಾರೆ. ಬಹುಶಃ ಡಿಮ್ಯಾಂಡ್ ಬರತಕ್ಕದ್ದು ಇನ್ನೂ 25 ದಿವಸ ಆಗಬಹುದು. ಇನ್ನೂ ಬಡ್ಜೆಟ್ ಮಂಡನೆ ಮಾಡಿ, ಅದರ ಬಗ್ಗೆ ಚರ್ಚೆ ನಡೆದು, ಆಮೇಲೆ ಇಲಾಖೆಯದು ಬರುತ್ತದೆ. ಆದುದರಿಂದ ದಯವಿಟ್ಟು, ಈ ವಿಚಾರದಲ್ಲಿ ತ್ವರಿತತೆಯ ಅರಿವು ನಿಮಗೆ ಆಗಿದ್ದರೆ, ಕೆಲಸ ಮುಂದುವರಿಸುವುದಕ್ಕೆ ಸಾಕಷ್ಟು ಹಣವನ್ನು ಒದಗಿಸುತ್ತೇವೆಂದು ಹೇಳಬೇಕು. ಮತ್ತು 200-300-500 ರೂಪಾಯಿ ಹೀಗೆ ಸಣ್ಣ ಸಣ್ಣ ಬಾಕಿ ಇಟ್ಟುಕೊಂಡಿರುವ ರೈತರ ಮನೆಗೆ ನುಗ್ಗಿ ಪಾತೆ ಬಚ್ಚೆ ಎಲ್ಲವನ್ನೂ ಹೊರಗೆ ಹಾಕುತ್ತಿದ್ದಾರೆ. ನಾನು ಕಳಕಳಿಯಿಂದ ಹೇಳುತ್ತಾ ಇದ್ದೇನೆ, ಈ ಎರಡು ವಿಷಯದಲ್ಲಿ ತಾವು ವಿವರಣೆ ಕೊಟ್ಟರೆ ಸಾಕು.

Sri H. M. CHANNABASAPPA. –All that I would like to say is, it is not as though the Government is blind. When you have spoken. we have taken note of them, whether they are platable or not.

ಶ್ರೀ ಎಚ್. ಡಿ. ದೇವೇಗೌಡ.—ಹಣಕಾಸಿನ ಸಚಿವರೂ ಇಲ್ಲೇ ಇದ್ದಾರೆ. ವಸೂಲಿ ನಿಲ್ಲಿಸುವುದರ ಬಗ್ಗೆ ಅವರೂ ಹೇಳಲಿ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಈ ವಿಷಯವನ್ನು ತಾವು ಒಪ್ಪಬೇಕು. ಬಡವರಿಗೆ, ನಿರ್ಗತಿಕರಿಗೆ ಮತ್ತು ಯಾರಿಗೆ ಕೊಡುವುದಕ್ಕೆ ಶಕ್ತಿ ಇಲ್ಲ ಅವರಿಗೆ ರಿಯಾಯಿತಿ ಕೊಡಿ ಎಂದರೆ ನಾನು ಒಪ್ಪುತ್ತೇನೆ. ಶಕ್ತಿ ಇರುವವರು ಈ ನಂದರ್ಭವನ್ನು ಉಪಯೋಗಿಸಿಕೊಳ್ಳುವುದು ಬೇಡ ಎಂದು ನಾನು ಹೇಳುತ್ತಾ ಇರುವುದು.

ಶ್ರೀ ಎಚ್. ಡಿ. ದೇವೇಗೌಡ.—ನಾನು ಕ್ಲೆಸ್ಟರ್‌ರನ್ನು ಕ್ಲಿಯರ್ ಮಾಡುತ್ತೇನೆ. ಐದು ನಾವಿರ, 10 ಸಾವಿರ ರೂಪಾಯಿ ಡ್ಯೂಸ್ ಇಟ್ಟುಕೊಂಡಿರುತ್ತಾರಲ್ಲ. ಅವರಿಗೆ ಖಂಡಿತ ಕೊಡಬೇಡಿ. ಏನು ಏನೂರು–ಇನ್ನೂರು ರೂಪಾಯಿ ಶಾರ್ಟ್‌ಟರ್ಮ್ ಲೋನ್ಸ್ ಇಟ್ಟುಕೊಂಡಿರುತ್ತಾರೆ. ಅಂತಹ ಹಿಡುವಳಿದಾರರಿಗೆ ರಕ್ಷಣೆ ಕೊಡಿ ಎಂದು ನಾನು ಹೇಳುತ್ತಾ ಇರುವುದು. ದೇವೇಗೌಡರು ಬಂದರೂ ಕೊಡಬೇಡಿ.

ಶ್ರೀ ಎಚ್. ಟಿ. ಕೃಷ್ಣಪ್ಪ.—ದಯವಿಟ್ಟು ಭೂ ಕಂದಾಯದ ವಸೂಲಾಲಯನ್ನು ತಡೆ ಹಿಡಿಯಬೇಕು.

Sri H. M. CHANNABASAPPA.—Hon. Leader of the Opposition and members will agree that there are people who take undue advantage of any concession given to the people who are in real difficulty. The Government have taken note of all suggestions given by members on both the sides and it is not our intention particularly in areas where difficulties have arisen on account of unforeseen reasons, where people are really in difficulties. ಅವರಿಗೂ ಯಾವ ತರಹ ಸಹಾಯ ಸೌಲಭ್ಯಗಳನ್ನು, ರಿಯಾಯಿತಿಗಳನ್ನು ಕೊಡತಕ್ಕದ್ದು ಮತ್ತು ನಿಜಿನತಕ್ಕದ್ದನ್ನು ಒಪ್ಪಿಕೊಳ್ಳೋಣ. ಆದರೆ, ಇವರ ನಂದಿಯಲ್ಲಿ ಅನೇಕ ಜನ ಮುಂದೆ ಬಂದು ಬಿಡುತ್ತಾರೆ. ಅದನ್ನು ತಗ್ಗಿಸುವುದಕ್ಕೆ ನಾವೂ ನೀವೂ ಎಲ್ಲರೂ ಒಪ್ಪಬೇಕು. ಮತ್ತೆ, ಈ ಎಂಪ್ಲಾಯಿಮೆಂಟ್ ವಿಷಯದಲ್ಲಿ ಏನು ಇದೆ, ಮೂರು ಜಿಲ್ಲೆಯಾಗಲೀ ಅಥವಾ ನಾಲ್ಕು ಜಿಲ್ಲೆಯಾಗಲೀ, ಹೀಗೆ ಅನೀರೀಕ್ಷಿತವಾಗಿ ಬಂದಂಥ ಕಷ್ಟ ಪರಿಸ್ಥಿತಿಯನ್ನು ನಾವು ಎದುರಿಸಲಿಕ್ಕೆ ತಯಾರಾಗಬೇಕು. ಆದುದರಿಂದ, ಹಾಸನ, ಮಂಡ್ಯ ಅಥವಾ ಮೈಸೂರು ಯಾವುದೇ ಜಿಲ್ಲೆಯಾಗಲೀ. ನರಕಾರ ಅವಶ್ಯಕವಾದಂಥ ಪ್ರಮಾಣದಲ್ಲಿ ಕೆಲಸಕಾರ್ಯಗಳು ಜನತೆಗೆ ಸಿಕ್ಕುವಂತೆ ವ್ಯವಸ್ಥೆ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇನೆ. ಅಲ್ಲಿ ಯಾರು ಬಡವರು ಇದ್ದಾರೆ, ಯಾರು ನಿಶ್ಯಕ್ತರಾಗಿದ್ದಾರೆ, ಅವರಿಗೆ ಹಿಂಸೆ ಕೊಡತಕ್ಕದ್ದು ಯೋಗ್ಯವಲ್ಲವೆಂದು ನಾನು ಸ್ಪಷ್ಟಪಡಿಸುತ್ತಿದ್ದೇನೆ. ಯಾರು ಯಾರಿಗೆ ಕೊಡುವ ಶಕ್ತಿ ಇದೆ, ಅವರಿಂದ ವಸೂಲ ಮಾಡಬೇಕು ಎಂದು ಆದೇಶ ಕೊಡುತ್ತೇನೆ. ಆದುದರಿಂದ, ರಾಜ್ಯಪಾಲರಿಗೆ ವಂದಿನತಕ್ಕ ನಿರ್ಣಯಕ್ಕೆ ತಾವು ಎಲ್ಲರೂ ಏಕಮತದಿಂದ ಅಭಿಪ್ರಾಯ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

Mr. DEPUTY SPEAKER.—With utmost goodwill I may tell the House that under the Rules of Procedure there is no scope for seeking clarification. As the Leader of the Opposition desired certain things, I accepted it.

4—30 P. M.

Before I put the motion to the vote of the House, I will put the amendments moved by Mr. T. R. Shamanna. The question is :

" That the following words shall be added at the end of the motion :

"but regret to note the :

1. Failure of Government to take concrete measures for increasing production and bringing down prices of Essential Commodities.

2. Failure of the Government in preventing abnormal rise in cost of the Bangalore Dairy Milk and the constant increase of the rates of rice, Joola etc.,

3. Failure of Government to take effective measures to stop rampant corruption from top to bottom.

4. Failure of Government to take effective measures to reduce the growing unemployment in the State.

5. Failure of Government to take measures to re-introduce prohibition as has been done in the neighbouring State of Tamil Nadu and as contemplated in Rajasthan though the Government is aware of the fact that prohibition is a cause for the miserable plight of the weaker section of the people.

6. Failure of the Government to bring down the cost of power which is essential for all economic development of the State both in agricultural as well as in industrial sectors.

7. Failure of the Government in giving useful and practical education to the students to enable them to become good citizens of the Country and also to build up a Welfare State.

8. Failure of the Government in getting a legitimate share for the use of the Rivers – Cauvery, Krishna, and other Water Resources.

9. Failure of the Government bringing pressure on the Central Government to complete the Railway Link between Hassan and Mangalore. and taking up the other Railway Projects.

10. Failure of the Government in putting sufficient pressure on the Central Government on immediately starting the Hospet Iron and Steel Unit.

11 Failure of the Government in properly conserving the Forest Resources and preventing in unlawful smuggling of forest products,

12. Failure of the Government in exploiting fully, the rich mineral wealth of the State.

13. Failure of the Government in giving protection to the rights of women, widows, minors and invalid persons and small holders in respect of land holdings in Land Reforms (Amendment) Act.

14. Failure of the Government in preventing the abnormal rise in the cost of paper which has caused great hardship to the public in general and the students in particular.

15. Failure of the Government in supplying the stamp paper of required value which has caused great hardship for preparing legal documents and getting copies of judgments from Courts, etc.

16. Failure of the Government in providing adequate financial assistance to the pensioners to enable them to live atleast a moderate life in their advanced age.

17. Failure of the Government in executing and completing many projects and also improving the roads and bridges.

18. Miserable failure of the Government in checking the mosquito nuisance in Bangalore City

19 Failure of the Government in preventing large-scale theft and other criminal acts by unsocial elements.

20. Failure of the Government in bringing down the cost of chemical manure by increasing the production of artificial manure.

21. Failure of the Government in cancelling the levy of Rs. 10 levied for all-electric-homes.

22. Failure of the Government in supplying the required quantity of essential drugs and allowing spurious drugs and medicines being sold in the Bazaars.

23. Failure of the Government in developing of the Karwar Port which will be a natural harbour when developed.

24. Failure of the Government in discontinuing the harmful lottery system, horse race, and the night clubs which are run on large scale.

25. Failure of the Government in taking action against several courts where undue delay is caused in taking decisions.

26. Failure of the Government in bringing down the cost of food stuffs which is essential to improve the living conditions of the house holders, if need be by giving substantial subsidy to the growers.

27. Failure of the Government in not allowing maladministration, misappropriation and misuse of power in many Co-operative Societies.

28. Failure of the Government in not allowing largescale increase of transport cost which has a direct bearing on the cost of production and distribution.

29. Failure of the Government in giving a clean and efficient administration.

30. Failure of the Government in the working of the Fourth Five Year Plan properly and profitably to the best advantage of the State.

31. Failure of the Government in completing the several River Projects in time."

The amendment was negatived

Mr. DEPUTY SPEAKER.—I will now put the motion to vote of the House. The question is:

"That we the Members of the Karnataka Legislative Assembly assembled in this Session, beg leave to thank the Governor for the Address delivered to the Members of the Legislature on the 10th February, 1975."

The motion was adopted